# 2. ದಾರಿದೀಪ

ಇಂದು ನಮ್ಮ ಸಮಾಜದಲ್ಲಿ ಮಾನವೀಯತೆಯೇ ಶಿಥಿಲವಾಗುತ್ತಿದೆ. ವ್ಯಕ್ತಿಯು ತನ್ನ ಸ್ವಾರ್ಥವೊಂದನ್ನು ಮಾತ್ರ ಗುರಿಯಾಗಿರಿಸಿಕೊಂಡು ಮುಂದುವರಿಯುತ್ತಿದ್ದಾನೆ. ಇದರಿಂದಾಗಿ ಸಮಾಜದ ಏಳಿಗೆಗೆ ಪೂರಕವಾಗಿರಬೇಕಾದ ಜೀವನ ಮೌಲ್ಯಗಳು ಕುಸಿಯುತ್ತಿವೆ. ಕುಸಿಯುತ್ತಿರುವ ಜೀವನ ಮೌಲ್ಯಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಅದಕ್ಕೆ ಪೂರಕವಾದ ಪಠ್ಯ ವಿಷಯಗಳನ್ನು ಇಲ್ಲಿ ಕ್ರಮೀಕರಿಸಿ ನೀಡಲಾಗಿದೆ.

ಈ ಘಟಕದ ಮೊದಲ ಪಾಠ 'ವೀರ ವನಿತೆ ಓಬವ್ವ'. ಇದರಲ್ಲಿ ಓಬವ್ವಳ ಉಜ್ವಲ ರಾಷ್ಟ್ರಪ್ರೇಮ, ಆತ್ಮಾಭಿಮಾನ, ಕೆಚ್ಚೆದೆಯ ಸಾಹಸವನ್ನು ಕಾಣುತ್ತೇವೆ. ಸ್ತ್ರೀಯು ಅಬಲೆಯಲ್ಲ, ಸಬಲೆ ಎಂಬುದನ್ನು ಈಕೆ ಜಗತ್ತಿಗೆ ಸಾಧಿಸಿ ತೋರಿಸಿದ್ದಾಳೆ.

'ಹೊಸಬೆಳಕು' ಪಾಠಭಾಗದಲ್ಲಿ ಹಿರಿಯರನ್ನು ಗೌರವಿಸುವ ಉದಾತ್ತ ಮನೋಭಾವವನ್ನು ಕಾಣುತ್ತೇವೆ. ಹಬ್ಬ ಹರಿದಿನಗಳಂದು ಹಿರಿಯರನ್ನು ಗೌರವಿಸುವುದು ನಮ್ಮ ಸಂಸ್ಕೃತಿ. ಧಾರ್ಮಿಕ ಹಬ್ಬಗಳ ಆಚರಣೆ ಮಾನವೀಯ ಸಂಬಂಧಗಳನ್ನು ಬೆಸೆಯುವಂತೆ ಮಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಈ ಮೂಲಕ ಧಾರ್ಮಿಕ ಆಚರಣೆಗಳ ಆವಶ್ಯಕತೆಯನ್ನು ವಿದ್ಯಾರ್ಥಿಗಳು ಮನಗಾಣಬೇಕು.

'ದಾನ ಧರ್ಮವ ಮಾಡಿರಯ್ಯ' ಈ ಕೀರ್ತನೆಯಲ್ಲಿ ಕನಕ ದಾಸರು ಮಾನವ ಧರ್ಮದ ರೀತಿ, ನೀತಿಗಳನ್ನು ನೀಡಿದ್ದಾರೆ. ಸಮಾಜದ ಅಂಕುಡೊಂಕುಗಳನ್ನು ಗುರುತಿಸಿ ತಿದ್ದುವ ಕೆಲಸವನ್ನು ಮಾಡಿದ್ದಾರೆ.

'ಆದರ್ಶಜೀವನ'ದಲ್ಲಿ ವ್ಯಕ್ತಿಗೆ ಸ್ವಾರ್ಥಕ್ಕಿಂತ ಸಮಾಜದ ಏಳಿಗೆಯ ಚಿಂತನೆಯು ಮುಖ್ಯ ಎನ್ನುವ ಆಶಯವು ವ್ಯಕ್ತವಾಗಿದೆ. ಈ ರೀತಿಯ ಪಠ್ಯ ವಸ್ತುಗಳು ವಿದ್ಯಾರ್ಥಿಯಲ್ಲಿ ಉತ್ತಮ ಗುಣಗಳನ್ನು ಬೆಳೆಸುವಲ್ಲಿ ಸಹಕಾರಿಯಾಗಲಿ.

## ಕಲಿಕಾ ಸಾಧನೆಗಳು

- ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
- ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು, ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
- ರಾಗ ತಾಳ ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಪ್ರಚಲಿತ ವಿದ್ಯಮಾನಗಳನ್ನು ವಾಚನ ಸಾಮಗ್ರಿಗಳ ಸಹಾಯದಿಂದ ಪರಿಶೀಲಿಸಿ ಸ್ವಂತ ರಚನೆಗಳನ್ನು ಉತ್ತಮಪಡಿಸುವುದು.
- ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಆಶಯಗಳನ್ನು ಸ್ವಂತವಾಗಿ, ಶಿಷ್ಟಭಾಷೆಯಲ್ಲಿ, ತಪ್ಪಿಲ್ಲದೆ ಬರೆಯುವುದು.
- ದಿನಚರಿ, ಆತ್ಮಕಥೆ, ಅನುಭವ ಟಿಪ್ಪಣಿ, ಜೀವನ ಚರಿತ್ರೆ ಮೊದಲಾದ ಲೇಖನಗಳನ್ನು ಓದಿ ಸ್ವಂತ ಅನುಭವಗಳನ್ನು ಸೇರಿಸಿ ಸ್ವಯಂ ರಚನೆ ಮಾಡುವುದು.
- ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
- ಸೃಜನಾತ್ಮಕ ಕೃತಿಗಳನ್ನು ತಯಾರಿಸುವುದು. ಅವುಗಳನ್ನು ತರಗತಿಯ ಭಿತ್ತಿ ಪತ್ರಿಕೆ, ಹಸ್ತಪತ್ರಿಕೆಗಳಲ್ಲಿ ಪ್ರಕಟಿಸುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ, ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯಿಸುವ ವಿವಿಧ ರೀತಿಗಳನ್ನು ಕಂಡುಕೊಳ್ಳುವುದು.
- ಕತೆ, ಕವಿತೆಗಳಲ್ಲಿ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.
- ಸೃಜನಾತ್ಮಕ ರಚನೆಗಳ ವಿಷಯಗಳನ್ನು ಸಂಗ್ರಹಿಸಿ ಬರೆಯುವುದು.

## ಯೂನಿಟ್ ಗ್ರಿಡ್ – 2. ದಾರಿದೀಪ

**ಪಾಠ 1 ವೀರ ವನಿತೆ ಓಬವ್ವ** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಕವನವನ್ನು ಭಾವಪೂರ್ಣವಾಗಿ ಹಾಡುವುದು.<br>• ಸ್ತ್ರೀಯು ಅಬಲೆಯಲ್ಲ ಸಬಲೆ ಎಂದು ತಿಳಿಸುವುದು.<br>• ಮಕ್ಕಳಲ್ಲಿ ದೇಶಪ್ರೇಮದ ಭಾವನೆಯನ್ನು ಮೂಡಿಸುವುದು.<br>• ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವವನ್ನು ಬೆಳಸುವುದು.<br>• ಅನಿರೀಕ್ಷಿತ ಆಪತ್ತುಗಳನ್ನು ಧೈರ್ಯದಿಂದ ಎದುರಿಸುವ ಸಾಮರ್ಥ್ಯವನ್ನು ಗಳಿಸುವುದು. | **ಹಾಡುವುದು**<br>• ಪದ್ಯಭಾಗವನ್ನು ರಾಗ, ತಾಳ, ಲಯಬದ್ಧವಾಗಿ ಹಾಡುವುದು ಉತ್ತರ ಬರೆಯುವುದು. ಪಾಠಭಾಗದಲ್ಲಿ ಬಂದ ಸರಳ ಪ್ರಶ್ನೆಗಳಿಗೆ ಉತ್ತರ ಬರೆಸುವುದು<br>**ಚರ್ಚಿಸುವುದು**<br>• ಪದ್ಯಭಾಗದಲ್ಲಿ ಓಬವ್ವಳು ವೀರನಾರಿಯಾಗಿ ಹೋರಾಡಿ ನಮ್ಮ ದೇಶವನ್ನು ಶತ್ರುಗಳಿಂದ ಕಾಪಾಡಿದುದನ್ನು ತಿಳಿದಿರುವರು. ಅವಳ ಸ್ಥಾನದಲ್ಲಿ ಈ ಮಕ್ಕಳು ಇರುತ್ತಿದ್ದರೆ ಏನು ಮಾಡುತ್ತಿದ್ದರು ಎಂಬುದನ್ನು ಚರ್ಚಿಸಲು ಹೇಳುವುದು.<br>**ಸಾಲು ಹುಡುಕುವುದು**<br>• ಓಬವ್ವಳ ಶೌರ್ಯ, ಸಾಮರ್ಥ್ಯ ವನ್ನು ಪ್ರತಿಬಿಂಬಿಸುವ ಸಾಲುಗಳನ್ನು ಹುಡುಕಿ ಬರೆಸುವುದು.<br>• ಕವಿತೆಯಲ್ಲಿ ಬಂದ ವರ್ಣನೆಯ ಸಾಲುಗಳನ್ನು ಹುಡುಕಿ ಬರೆಸುವುದು.<br>• ಕಥಾರೂಪಕ್ಕೆ ಬದಲಾಯಿಸುವ: ಪದ್ಯಭಾಗವನ್ನು ಓದಿ ಅರ್ಥೈಸಿ ಸರಳವಾದ ಗದ್ಯ ರೂಪದಲ್ಲಿ ಬರೆಸುವುದು<br>**ಓದಿ ಪೂರ್ತಿಗೊಳಿಸುವ**<br>• ವಾಕ್ಯದಲ್ಲಿ ಕೊಟ್ಟಿರುವ ಅಡಿಗೆರೆ ಎಳೆದ ಪದದ ವಿರೋಧಾರ್ಥವನ್ನು ಕಂಡು ಹಿಡಿದು ವಾಕ್ಯಗಳಲ್ಲಿ ಖಾಲಿಬಿಟ್ಟ ಜಾಗವನ್ನು ತುಂಬಿಸುವುದು. | • ಚಲನಚಿತ್ರದ ಸಿ.ಡಿ. ಪ್ರದರ್ಶನ (‘ನಾಗರ ಹಾವು’ – ಪಠ್ಯಕ್ಕೆ ಸಂಬಂಧಿಸಿದುದು ಮಾತ್ರ)<br>• ವೀರ ಮಾತೆಯರ ಇತರ ಕಥಾ ಪುಸ್ತಕ | • ಗದ್ಯ ರೂಪ<br>• ವಾಕ್ಯಗಳು<br>ಆಶಯ ಗ್ರಹಣ ಉತ್ತರಗಳು<br>ಆಶಯ<br>ಲೇಖನ |

## ಯೂನಿಟ್ ಗ್ರಿಡ್

**ಪಾಠ 2 ಹೊಸ ಬೆಳಕು** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಮಾನವೀಯ ಮೌಲ್ಯಗಳನ್ನು ತಿಳಿಯುವುದು. ಹಿರಿಯರನ್ನು ಪೂಜ್ಯಭಾವನೆಯಿಂದ ಕಾಣುವುದು. ಹಬ್ಬಗಳು ಮಾನವೀಯ ಮೌಲ್ಯಗಳನ್ನು ಬಲಪಡಿಸುವಂತಿರಬೇಕು.<br><br>• ಹೆತ್ತವರನ್ನು ವೃದ್ಧಾಪ್ಯದಲ್ಲಿ ಚೆನ್ನಾಗಿ ನೋಡಿಕೊಳ್ಳುವುದು. | • **ಓದುವುದು:** ಪಾಠಭಾಗವನ್ನು ಮಕ್ಕಳು ವೈಯಕ್ತಿಕವಾಗಿ ಓದಿ ಆಸ್ವಾದಿಸುವುದು. ಸುಭಾಸನ ವರ್ತನೆಯಿಂದ ಹೆತ್ತವರಲ್ಲಿ ಮೂಡಿಬಂದ ಧನ್ಯತೆಯ ಭಾವದ ಬಗ್ಗೆ ಮಕ್ಕಳು ಚರ್ಚೆ ನಡೆಸುವರು.<br>• **ಉತ್ತರ ಬರೆಯುವುದು:** ಪಾಠಭಾಗದಲ್ಲಿ ಬಂದ ಸರಳ ಪ್ರಶ್ನೆಗಳಿಗೆ ಉತ್ತರ ಬರೆಯವುದು.<br>• **ಟಿಪ್ಪಣಿ ತಯಾರಿಸುವುದು:** ಅಸಹಾಯಕರಿಗೆ ಸಹಾಯ ಮಾಡುವ ಮನೋಧರ್ಮದ ಕುರಿತು ಟಿಪ್ಪಣಿ ಬರೆಯುವುದು.<br>• **ಸಂಭಾಷಣೆ ಬರೆಯುವುದು:** ಘಟನೆಯನ್ನು ಊಹಿಸಿ ಸಂಭಾಷ ಣೆಯನ್ನು ಬರೆಯುವುದು.<br>• **ಭಿತ್ತಿ ಪತ್ರಿಕೆ ತಯಾರಿಸುವುದು:** ದಿನಪತ್ರಿಕೆಗಳಲ್ಲಿ ಬರುವ ಕಷ್ಟದಲ್ಲಿರು ವವರಿಗೆ ಸಹಾಯ ಮಾಡುವ ವರದಿಗಳನ್ನು ಪತ್ರಿಕೆಗಳಿಂದ ಸಂಗ್ರಹಿಸಲು ಹೇಳುವುದು.<br>• **ಬದಲಾಯಿಸಿ ಬರೆಯುವುದು:** ಪಾಠಭಾಗದಲ್ಲಿ ಕೊಟ್ಟಿರುವ ಗದ್ಯಭಾ ಗದಲ್ಲಿರುವ ವಾಕ್ಯಗಳನ್ನು ಲಿಂಗ ಬದಲಾಯಿಸಿ ಬರೆಯುವುದು.<br>• **ವಾಕ್ಯರಚಿಸುವುದು:** ಅಡಿಗೆರೆ ಎಳೆದ ಪದಗಳ ಅರ್ಥವನ್ನು ಗಮನಿಸಿಕೊಂಡು ಸ್ವಂತವಾಕ್ಯವನ್ನು ರಚಿಸುವುದು. | • ಹಬ್ಬಗಳ ಸಿ.ಡಿ. ಪ್ರದರ್ಶನ.<br><br>• ಹಬ್ಬಗಳಿಗೆ ಸಂಬಂಧಿಸಿದ ಪುಸ್ತಕಗಳು.<br><br>• ಸಂಗ್ರಹಿಸಿದ ಪತ್ರಿಕಾ ವರದಿಗಳು | • ಟಿಪ್ಪಣಿ<br><br>• ಸಂಭಾಷಣೆ<br><br>• ಭಿತ್ತಿಪತ್ರಿಕೆ |

# ಯೂನಿಟ್ ಗ್ರಿಡ್

**ಪಾಠ 3 ದಾನ ಧರ್ಮವ ಮಾಡಿರಯ್ಯಾ** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಪದ್ಯಭಾಗವನ್ನು ರಾಗ, ತಾಳ, ಲಯದೊಂದಿಗೆ ಭಾವಪೂರ್ಣವಾಗಿ ಹಾಡುವುದು. ದಾಸ ಸಾಹಿತ್ಯದ ಬಗ್ಗೆ ತಿಳಿದುಕೊ ಳ್ಳುವುದು.<br>• ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನೋಧರ್ಮವನ್ನು ಬೆಳೆಸಿಕೊಳ್ಳುವುದು.<br>• ಉತ್ತಮ ನಡೆನುಡಿಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದು. ಕನಕದಾಸರ ಕುರಿತಾಗಿ ಓದಿ ತಿಳಿಯುವುದು. | • ಹಾಡುವುದು: ರಾಗ, ತಾಳ, ಲಯಬದ್ಧವಾಗಿ ಹಾಡುವುದು.<br>• ಉತ್ತರ ಬರೆಯುವುದು: ಸರಳ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• ಆಶಯ ಬರೆಯುವುದು: ಪಾಠಭಾಗದಲ್ಲಿ ಬಂದ ಸಾಲುಗಳ ಆಶಯವನ್ನು ಬರೆಯುವುದು.<br>• ಪಟ್ಟಿ ಮಾಡುವುದು: ಮನುಷ್ಯನಲ್ಲಿ ಇರಬೇಕಾದ ಉತ್ತಮ ಗುಣನಡತೆಗಳನ್ನು ಗುರುತಿಸಿ ಪಟ್ಟಿ ಮಾಡುವುದು.<br>• ಅನುಭವ ಲೇಖನ ಬರೆಯುವುದು: ಉತ್ತಮ ಕೆಲಸಗಳಿಗೆ ದೊರೆತ ಅಭಿನಂದನೆಯ ಅನುಭವ ಲೇಖನವನ್ನು ಬರೆಯುವುದು. | ಕೀರ್ತನೆಗಳ ಸಿ.ಡಿ.ಯನ್ನು ಆಲಿಸಿ, ಆಸ್ವಾದಿಸುವುದು. | |

## ಯೂನಿಟ್ ಗ್ರಿಡ್

**ಪಾಠ 4 ಆದರ್ಶ ಜೀವನ** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ/ಚಟುವಟಿಕೆಗಳು | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಮಕ್ಕಳಲ್ಲಿ ಪರೋಪಕಾರ, ಪ್ರಾಮಾಣಿಕತೆ, ಸರಳತೆ ಮತ್ತು ತ್ಯಾಗ ಮುಂತಾದ ಮನೋ ಭಾವಗಳನ್ನು ಬೆಳೆಸುವುದು.<br>• ನಮ್ಮ ದೇಶದಲ್ಲಿ ಖ್ಯಾತಿ ಪಡೆದ ಆದರ್ಶ ವ್ಯಕ್ತಿಗಳ ಗುಣನಡತೆಗಳನ್ನು ಮಾದರಿಯಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವುದು.<br>• ಭಾರತದ ಎರಡನೇ ಪ್ರಧಾನಿ ಯಾಗಿದ್ದ ಲಾಲ್‌ಬಹಾದೂರ್ ಶಾಸ್ತ್ರಿಗಳ ಜೀವನ ಆದರ್ಶಗಳನ್ನು ತಿಳಿಸುವುದರ ಜತೆಗೆ ವಿದ್ಯಾರ್ಥಿಗಳಲ್ಲಿ ಇಂತಹ ಗುಣಗಳನ್ನು ಬೆಳೆಸುವುದು.<br>• ಮಹಾವ್ಯಕ್ತಿಗಳ ಜೀವನ ಚರಿತ್ರೆಯನ್ನು ಓದುವುದು. | **ಚರ್ಚಿಸುವುದು**<br>• ಲಾಲ್‌ಬಹದ್ದೂರ್ ಶಾಸ್ತ್ರಿಗಳ 'ಜೈಜವಾನ್ ಜೈ ಕಿಸಾನ್' ಎನ್ನುವ ಘೋಷಣೆಯನ್ನು ಮೊಳಗಿಸಿದುದರ ಕಾರಣವನ್ನು ಚರ್ಚಿಸುವುದು.<br>**ಉತ್ತರ ಬರೆಯುವುದು**<br>• ಅಭ್ಯಾಸ ಭಾಗದಲ್ಲಿ ಬಂದ ಸರಳ ಪ್ರಶ್ನೆಗಳಿಗೆ ಉತ್ತರಿಸುವುದು.<br>**ಟಿಪ್ಪಣಿ ತಯಾರಿಸುವುದು**<br>• ಲಾಲ್ ಬಹದ್ದೂರ್ ಶಾಸ್ತ್ರಿಗಳ ಜೀವನ ಘಟನೆಯನ್ನು ಆಧರಿಸಿ ಅವರ ಸ್ವಭಾವ ಮತ್ತು ಆದರ್ಶಗಳ ಕುರಿತು ಟಿಪ್ಪಣಿ ತಯಾರಿಸುವುದು. ಅವಶ್ಯಕತೆಗಿಂತ ಹೆಚ್ಚಿಗೆ ಬೇಡ ಎಂಬ ಶಾಸ್ತ್ರಿಗಳ ಮಾತಿನ ಬಗ್ಗೆ ಮಕ್ಕಳು ಅವರ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆಯಲಿ.<br>**ಸಂಚಿಕೆ ತಯಾರಿಸುವ**<br>• ಲಾಲ್‌ಬಹದ್ದೂರ್ ಶಾಸ್ತ್ರಿಗಳಂತಹ ಮಹಾನ್‌ವ್ಯಕ್ತಿ ಗಳ ಜೀವನದ ಘಟನೆಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸುವುದು.<br>**ವಾಕ್ಯರಚಿಸುವ**<br>• ಪಾಠಭಾಗದಲ್ಲಿ ಬಂದ ಕ್ರಿಯಾಪದಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸುವುದು. | ಲಾಲ್‌ಬಹದ್ದೂರ್ ಶಾಸ್ತ್ರಿಗಳ ಕುರಿತಾದ ಸಿ.ಡಿ.ಗಳು, ಪುಸ್ತಕಗಳು | ಪ್ರಶ್ನೋತ್ತರ<br>ಟಿಪ್ಪಣಿ<br>ಟಿಪ್ಪಣಿ<br>ಸಂಚಿಕೆ<br>ಸ್ವಂತ ವಾಕ್ಯ |

# ವೀರ ವನಿತೆ ಓಬವ್ವ

***ಕವಿ ಪರಿಚಯ***

## ಚಿ. ಉದಯಶಂಕರ

ಶ್ರೀ ಚಿ. ಉದಯಶಂಕರರು 1934 ಫೆಬ್ರುವರಿ ತಿಂಗಳ 18ನೇ ತಾರೀಕಿನಂದು ಜನಿಸಿದರು. ಇವರ ತಂದೆಯ ಹೆಸರು ಚಿ.ಸದಾಶಿವಯ್ಯ. ಸಾಹಿತ್ಯ ಕ್ಷೇತ್ರದಲ್ಲಿ ಹಲವು ಸಾಧನೆಗಳನ್ನು ಮಾಡಿದ ಇವರು ಕನ್ನಡ ಸಿನೆಮಾ ಕ್ಷೇತ್ರಕ್ಕೆ 3000ಕ್ಕಿಂತಲೂ ಹೆಚ್ಚು ಹಾಡುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಭಕ್ತಿಗೀತೆಗಳೂ ಇವೆ. ಹಲವು ಕನ್ನಡ ಸಿನೆಮಾಗಳಿಗೆ ಸಂಭಾಷಣೆಯನ್ನು ರಚಿಸಿದ್ದಾರೆ. 1968ರಲ್ಲಿ 'ಮಂಕು ದಿಣ್ಣೆ' ಎಂಬ ಸಿನೆಮಾವನ್ನೂ ನಿರ್ದೇಶಿಸಿದ್ದಾರೆ. ಇವರ ಸಾಧನೆಯನ್ನು ಗುರುತಿಸಿ 'ಸಾಹಿತ್ಯ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಇವರು ತಮ್ಮ 59ನೇ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರು. (1993).

ನಮ್ಮ ನಾಡಿನ ರಕ್ಷಣೆಗಾಗಿ ಹೋರಾಡಿದವರು ಹಲವು ಮಂದಿ. ಅವರಲ್ಲಿ ಅನೇಕ ಮಹಿಳೆಯರೂ, ವೀರ ನಾರಿಯರೂ ಇದ್ದಾರೆ. ಝಾನ್ಸಿರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಕಿತ್ತೂರರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮೊದಲಾದವರು ಪ್ರಮುಖರು.ಇವರೆಲ್ಲ ಕೆಚ್ಚೆದೆಯಿಂದ ಹೋರಾಟ ನಡೆಸಿ ನಾಡನ್ನು ರಕ್ಷಿಸಲು ಅವಿರತವಾಗಿ ಶ್ರಮಿಸಿದವರು, ದೇಶಕ್ಕಾಗಿ ಪ್ರಾಣವನ್ನು ತೆತ್ತವರು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ವನಿತೆಯರ ತ್ಯಾಗ, ಬಲಿದಾನ, ಸಾಹಸದ ಕತೆಗಳನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದು ಅಗತ್ಯ.

ಕೆಲವು ಸರಳ ಪ್ರಶ್ನೆಗಳನ್ನು ಕೇಳುವುದರ ಮೂಲಕ ಪಾಠ ಪ್ರವೇಶ ಮಾಡುವುದು

- ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದುದು ಯಾವಾಗ?
- ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶವನ್ನು ಯಾರು ಆಳುತ್ತಿದ್ದರು?
- ನಮ್ಮ ದೇಶಕ್ಕೆ ಸ್ವಾತಂತ್ರ್ಯ ಹೇಗೆ ಲಭಿಸಿತು?
- ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಿದ ಮಹನೀಯರು ಯಾರು?
- ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರ ಮಹಿಳೆಯರು ಯಾರು?

### ಹಾಡುವುದು

ಕಥನ ಕವನವನ್ನು ಮಕ್ಕಳು ಓದಲಿ. ಅನಂತರ ಗುಂಪಿನಲ್ಲಿ ಹಾಡಲಿ. ಉಳಿದ ಗುಂಪಿನವರು ಮೌಲ್ಯಮಾಪನ ಮಾಡಲಿ. ಆ ಬಳಿಕ ಅಧ್ಯಾಪಕರು ಭಾವಪೂರ್ಣವಾಗಿ ಹಾಡುವುದು. ಮಕ್ಕಳಿಗೆ ವೀರವನಿತೆ ಓಬವ್ವಳ ಕತೆಯಿರುವ ಭಾಗದ ಸಿ.ಡಿ.ಯ ಪ್ರದರ್ಶನ ಮಾಡುವುದು. ಆ ಮೂಲಕ ಮಕ್ಕಳೇ ಕಥೆಯನ್ನು ಅರ್ಥ ಮಾಡಿಕೊಳ್ಳುವಂತೆ ಪ್ರೇರೇಪಿಸುವುದು.

### ಉತ್ತರ ಬರೆಯುವುದು

ಪದ್ಯಭಾಗದಲ್ಲಿ ಬಂದ ಸರಳ ಪ್ರಶ್ನೆಗಳಿಗೆ ಕ್ರಮದಂತೆ ಉತ್ತರ ಬರೆಸುವುದು.

### ಚರ್ಚಿಸುವುದು

ಪದ್ಯಭಾಗದಲ್ಲಿ ಓಬವ್ವನ ಸಾಹಸವನ್ನು ವರ್ಣಿಸಲಾಗಿದೆ. ಮಕ್ಕಳು ಓದಿ, ಹಾಡಿ ಆಸ್ವಾದಿಸಲಿ. ಅ ಬಳಿಕ ಓಬವ್ವನ ಸಾಹಸದ ಕುರಿತು, ಅಪ್ರತಿಮ ದೇಶಭಕ್ತಿಯ ಕುರಿತು ಚರ್ಚೆ ನಡೆಸಬೇಕು. ಅನಿರೀಕ್ಷಿತ ಸನ್ನಿವೇಶದಲ್ಲಿ ನೀರಿಗೆ ಬಂದ ಓಬವ್ವ ಒನಕೆ ತಂದು ಶತ್ರುಗಳನ್ನು ಸದೆಬಡಿದ ಸಂದರ್ಭೋಚಿತವಾದ ಧೈರ್ಯ ಸಾಹಸವನ್ನು ವಿದ್ಯಾರ್ಥಿಗಳು ತಿಳಿಯಲಿ. ಬಳಿಕ ಓಬವ್ವನ ಸ್ಥಾನದಲ್ಲಿ ನೀವಿದ್ದರೆ ಏನು ಮಾಡುತ್ತಿದ್ದಿರಿ? ಎಂಬ ಪ್ರಶ್ನೆಯನ್ನು ಕೇಳುವುದು. ಮಕ್ಕಳು ಯೋಚಿಸಿ ಉತ್ತರಿಸಲಿ. ಅನಿರೀಕ್ಷಿತ ಆಪತ್ತುಗಳನ್ನು ಎದುರಿಸುವ ಕೌಶಲವು ಮಕ್ಕಳಲ್ಲಿ ಬೆಳೆಯ ಬೇಕಲ್ಲವೇ?

### ಪದ್ಯದ ಸಾಲು ಹುಡುಕುವುದು

ಓಬವ್ವಳನ್ನು ವೀರನಾರಿಯಾಗಿ ಹಾಡಿ ಹೊಗಳಿದ ಸನ್ನಿವೇಶವಿರುವ ಪದ್ಯದ ಸಾಲುಗಳನ್ನು ಹುಡುಕಿ ಮಕ್ಕಳು ಬರೆಯಲಿ.

ಕವಿತೆಯಲ್ಲಿ ವರ್ಣನೆಯಿರುವ ಸಾಲುಗಳನ್ನು ಹುಡುಕಿ ಬರೆಯಲಿ.

### ಕಥಾರೂಪಕ್ಕೆ ಬದಲಾಯಿಸುವುದು

ಪದ್ಯಭಾಗದಲ್ಲಿ ಬರುವ ಓಬವ್ವಳ ಸಾಹಸದ ಕತೆಯನ್ನು ಮಕ್ಕಳು ವೈಯಕ್ತಿಕವಾಗಿ ಗದ್ಯರೂಪದಲ್ಲಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಪರಸ್ಪರ ಓದಿ ತಾವು ಬರೆದ ಕತೆಯನ್ನು ಉತ್ತಮ ಪಡಿಸಲಿ. ಉತ್ತಮವಾಗಿ ಬರೆದಿದ್ದಾರೆ ಎಂದು ನಿರ್ಧರಿಸುವುದು ಹೇಗೆ? ಸೂಚಕಗಳು

***ಸೂಚಕಗಳು:***

- ಕತೆಯು ಪೂರ್ಣ ಆಶಯವನ್ನು ಒಳಗೊಂಡಿದೆ.
- ಕ್ರಮ ಪ್ರಕಾರ ಆಶಯವನ್ನು ಬರೆಯಲಾಗಿದೆ.
- ಸ್ವಂತ ವಾಕ್ಯಗಳಲ್ಲಿ ಬರೆಯಲಾಗಿದೆ.
- ವಾಕ್ಯ ರಚನಾ ನಿಯಮಗಳನ್ನು ಪಾಲಿಸಲಾಗಿದೆ.

### ಓದಿ ಪೂರ್ತಿಗೊಳಿಸುವ

ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ವಿರೋಧಾರ್ಥ ಪದಗಳನ್ನು ಗುರುತಿಸಿ, ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಪೂರ್ತಿಗೊಳಿಸಿರಿ.

1. ಕಷ್ಟದಲ್ಲಿರುವವನಿಗೆ ಸಹಾಯ ಮಾಡುವುದು <u>ಪುಣ್ಯ</u> ಕೆಲಸ
2. ನಾವು ಪರಸ್ಪರ ವೈರದಿಂದ ಬಾಳಿದರೆ ದೇಶಕ್ಕೆ <u>ಕೆಡುಕು</u>
3. <u>ಬೆಳಕು</u> ಕತ್ತಲೆಯನ್ನು ಓಡಿಸುತ್ತದೆ
4. ನೆಲದಲ್ಲಿ ಹರಡಿದ್ದ ಬಿಸ್ಕೆಟ್ ತುಂಡುಗಳನ್ನು ಬೆಕ್ಕು <u>ನಿಶ್ಶೇಷವಾಗಿ</u> ತಿಂದು ಮುಗಿಸಿತು.

### ಹೆಚ್ಚಿನ ಓದಿಗೆ

## ಮಹಿಳಾಮಣಿ ಮಲ್ಲಮ್ಮ

ಮಹಿಳಾಮಣಿ ಮಲ್ಲಮ್ಮನ
ಮರೆಯದೆ ಸಾರುವೆ ವೀರತನ
ಅಲ್ಲಿ ಇಲ್ಲಿ ಇದ್ದವರೆಲ್ಲ ಕೇಳಿ
ಅವಳ ಕ್ಷಾತ್ರತೇಜವ ಹೇಳಿ
ಬೆಳಗಾವಿ ಜಿಲ್ಲೆಯ ಬೆಳವಡಿ ಊರು
ಮೂರು ನೂರು ವರ್ಷಗಳ ಹಿಂದೆ
ಆಗಿತ್ತು ದೊಡ್ಡ ಪಟ್ಟಣ
ಸಂಸ್ಥಾನದ ರಾಜಧಾನಿಯ ತಾಣ
ಆಳುತ್ತಿದ್ದ 'ಈಶ ಪ್ರಭು'ರಾಜನು
ತಕ್ಕಪತ್ನಿಯಾಗಿದ್ದಳು 'ಮಲ್ಲಮ್ಮ'

ದಂಪತಿಗಳಾಗಿದ್ದರು ವೀರರು
ಸಕಲರ ಮನ–ಮನೆಗಳಲಿ ಸುಖದ ಸೊಡರು
ಒಮ್ಮೆ ವಕ್ಕರಿಸಿದರು ಶಿವಾಜಿ ಸೈನಿಕರು
ತೆಗೆದರು ಜಗಳ ಕಾಲು ಕೆದರಿ
ಮುತ್ತಿದರು ಬೆಳವಡಿ ಕೋಟೆಯನು
'ಈಶಪ್ರಭು' ಸಿಂಹದಂತೆ ಆರ್ಭಟಿಸಿದನು
ಹೋರಾಡಿದ ವೀರಾವೇಶದಲಿ
ಸಾವಿರಾರು ಶತ್ರುಗಳ ತುಂಡರಿಸಿದ
ವೈರಿಯ ಕತ್ತಿಯು ನಾಟಿತು ಎದೆಗೆ
ಹೌಹಾರಿದರು ರಾಜನ ಸಾವಿನ ಸುದ್ದಿಗೆ
ಕೋಪ–ತಾಪದಿ ನೊಂದಳು ಮಲ್ಲಮ್ಮ
ನುಗ್ಗಿದಳು ಒಮ್ಮೆಗೆ ರಣರಂಗಕೆ
ಧೈರ್ಯವ ತುಂಬಿದಳು ತನ್ನಯ ಸೈನಿಕರಿಗೆ
ಚಂಡಿ ಚಾಮುಂಡಿಯಾದಳು ವೈರಿಗಳಿಗೆ
ಅನತಿ ಕಾಲದಲಿ ಒಟ್ಟಿದಳು ಹೆಣಗಳ ರಾಶಿ
ಶಿವಾಜಿ ಸೈನಿಕರು ಓಡಿದರು ದಿಕ್ಕೆಟ್ಟು
ಗಂಡನ ಆತ್ಮಕೆ ಕೋರಿದಳು ಸದ್ಗತಿ
ಶತ್ರುಗಳಿಗೆಲ್ಲ ಕಾಣಿಸಿದಳು ಅಧೋಗತಿ

ಸೋತ ವಿಷಯ ತಿಳಿದು ಶಿವಾಜಿಯಾದ ಕೆಂಡ
ನುಡಿದ "ಮಾಡಿ ಬಿಡಿರಿ ಸಕಲರ ಸಂಹಾರ"
ಬೆಳವಡಿ ಗೆಲ್ಲಲು ತೊಟ್ಟನು ಪಣ
ಬಲವಾದ ಸೈನಿಕರನಟ್ಟಿದ ತಕ್ಷಣ
ಶಿವಾಜಿ ಮಾತಿಗೆ ಹಾಕಲಿಲ್ಲ ಮಲ್ಲಮ್ಮ ಸೊಪ್ಪು
ಸಕಲ ಸಿದ್ಧತೆ ಗೈದಳು ಒಳಗೊಳಗೆ
ಮುಗಿಬಿದ್ದಳು ಕೋಟೆ ಬಾಗಿಲು ತೆಗೆಯಿಸಿ
ನೆಗೆದಳು ಕೆರಳಿದ ಕೇಸರಿಯಂತೆ ಗರ್ಜಿಸಿ

ಮಲ್ಲಮ್ಮ ಏರಿದ್ದ ಕುದುರೆ ಕಾಲನು
ಕತ್ತರಿಸಿದ ಶಿವಾಜಿಯ ಸೈನಿಕನೊಬ್ಬ
ಅಂಜದೆ ಹೋರಾಟ ನಡೆಸಿದಳು ಧೀರೆ
ಬಲಯುತ ಏಟು ಬೀಳಲು ಸಿಕ್ಕಳು ಧೀರೆ

ಶಿವಾಜಿ ಅರಿತ 'ಮಲ್ಲಮ್ಮನ ಸಾಹಸ ಗಾಥೆ
ಹಾಡಿ ಹರಸಿದ ಅವಳ ತ್ಯಾಗ–ಶೂರತನ
ಸಹೋದರಿಯೆಂದು ಹೃದಯದಿಂದ ಹೊಗಳಿದನು
ಆದರದಿಂದ ಗೌರವಿಸಿ ಉಡುಗರೆ ನೀಡಿ ಬೀಳ್ಕೊಟ್ಟನು

**– ಜನಪದ ಲಾವಣಿ**

## ಕಿರಣ್ ಬೇಡಿ

ಆಧುನಿಕ ಮಹಿಳೆ ಕಿರಣ್ ಬೇಡಿ ಹೆಸರನ್ನು ಕೇಳದವರು ಯಾರು? ಭಾರತದ ಮೊದಲ ಮಹಿಳಾ ಐ.ಪಿ.ಎಸ್. ಅಧಿಕಾರಿ ಯಾರು ಎಂದು ಕೇಳಿದರೆ ಕಿರಣ್ ಬೇಡಿ ಎಂಬ ಹೆಸರು ಹೇಳುತ್ತೇವೆ. ಸರ್ಕಾರಿ ಸೇವೆಯಿಂದ ನಿವೃತ್ತರಾಗಿ ಸಾಮಾಜಿಕ ಸೇವೆಯನ್ನು ಮಾಡುತ್ತಿದ್ದಾರೆ ಕಿರಣ್ ಬೇಡಿ.

ಹಿಂದೆ ಹೆಣ್ಣು ಮಕ್ಕಳು ಎಂದರೆ ಸಾಕು, ಸ್ಕೂಲಿನಲ್ಲಿ ಟೀಚರ್, ಯಾವುದಾದರೂ ಸರ್ಕಾರಿ ಕಛೇರಿಯಲ್ಲಿ ಕೆಲಸ ಎಂಬ ಮಾತು ಕೇಳಿಬರುತ್ತಿತ್ತು. ಆದರೆ ಕಿರಣ್ ಬೇಡಿ ಮಾತ್ರ ತನ್ನ ಯೋಚನಾ ದಿಕ್ಕನ್ನು ಬದಲಿಸಿಕೊಂಡಳು. ಪಂಜಾಬಿ ವ್ಯಾಪಾರಿ ಕುಟುಂಬವೊಂದರಲ್ಲಿ ಕಿರಣ್ ಬೇಡಿ 1949ರಲ್ಲಿ ಜನಿಸಿದರು. ಬಾಲ್ಯದಿಂದಲೇ ಕಿರಣ್ ಬೇಡಿ ಪ್ರತಿಭಾವಂತ ವಿದ್ಯಾರ್ಥಿನಿ ಎನಿಸಿಕೊಂಡವರು. ಅವರ ಕನಸು ತಾನು

ಪೊಲೀಸ್ ಅಧಿಕಾರಿಯಾಗಬೇಕು ಎಂದು ಇತ್ತು.

ಕಿರಣ್ ತನ್ನ ಕನಸನ್ನು ನನಸು ಮಾಡಿಕೊಳ್ಳಲು ಇಂಗ್ಲಿಷ್ ಭಾಷೆಯಲ್ಲಿ ಪದವಿಯನ್ನು ಪಡೆದುಕೊಂಡು, ನಂತರ ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡರು. ಹಾಗೆಯೇ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಆಯ್ಕೆ ಮಾಡಿಕೊಂಡು ಕಷ್ಟಪಟ್ಟು ಓದಿ ಉತ್ತೀರ್ಣರಾದರು. ಮನೆಯವರಿಗೆ ಕಿರಣ್‌ನ ಸಾಧನೆಯನ್ನು ಕಂಡು ಅಪಾರ ಸಂತೋಷವಾಯಿತು. ಕಿರಣ್ ತಾನು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುವುದಾಗಿ ಹೇಳಿದಾಗ ಕುಟುಂಬದವರು ವಿರೋಧ ವ್ಯಕ್ತಪಡಿಸಿದರು. ಆದರೆ ಕಿರಣ್ ಅಂಜಲಿಲ್ಲ. ತಾನು ಪೊಲೀಸ್ ಅಧಿಕಾರಿಣಿಯಾಗಿ ಸೇವೆ ಸಲ್ಲಿಸುವೆನು ಎಂದು ಕುಟುಂಬದವರನ್ನು ಒಲಿಸಿ ಒಪ್ಪಿಸಿದರು. ಮೊದಲ ಬಾರಿಗೆ ದೆಹಲಿಯ ಚಾಣಕ್ಯಪುರಿಗೆ ಬಂದು ಪೊಲೀಸ್ ಇಲಾಖೆಯಲ್ಲಿ ತನ್ನ ಕೆಲಸವನ್ನು ಪ್ರಾರಂಭಮಾಡಿದರು. ಹೀಗೆ ಕಿರಣ್ ಬೇಡಿ ಹಂತ, ಹಂತವಾಗಿ ಪೊಲೀಸ್ ಇಲಾಖೆಯಲ್ಲಿ ಮೇಲೇರಿ ಬಂದರು.

ಕಿರಣ್ ಬೇಡಿ ಪೊಲೀಸ್ ಇಲಾಖೆಯಲ್ಲಿ ಕೆಲಸವನ್ನು ಆಯ್ಕೆ ಮಾಡಿಕೊಳ್ಳಲು ಪ್ರಬಲವಾದ ಕಾರಣ ದೀನ ದಲಿತರಿಗೆ, ಅಸಹಾಯಕರಿಗೆ ಸೇವೆ ಸಲ್ಲಿಸಬೇಕು ಎಂಬ ಹಂಬಲ. ಹೀಗಾಗಿ ಕಿರಣ್ ಪೊಲೀಸ್ ಇಲಾಖೆಯನ್ನು ಆಯ್ದುಕೊಂಡರು. ದೆಹಲಿಯ ತಿಹಾರ್ ಜೈಲಿನಲ್ಲಿ ಮಹಿಳಾ ಖೈದಿಗಳಾಗಿರುವವರಿಗೆ ಬದುಕಿನಲ್ಲಿ ಸಕಾರಾತ್ಮಕವಾಗಿ ಯೋಚಿಸಲು ಕಲಿಸಿದ ಸಾಹಸಿ ಮಹಿಳೆ ಕಿರಣ್ ಬೇಡಿ. ಮಹಿಳಾ ಖೈದಿಗಳ ಬದುಕಿನಲ್ಲಿ ಹೊಸ ಕಿರಣವನ್ನು ಸೃಷ್ಟಿ ಮಾಡಲು ಶ್ರಮಿಸಿದ ಕಿರಣವೇ ಈ ಕಿರಣ್ ಬೇಡಿ.

ಕಿರಣ್ ಅವರ ಪೊಲೀಸ್ ವೃತ್ತಿಯಲ್ಲಿ ನೋವು ನಲಿವುಗಳನ್ನು ಸಮಾನಾಗಿ ಕಂಡಿದ್ದಾರೆ ಎನ್ನಬಹುದು. ಕಾರಣ ಪೊಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿದ್ದಾಗ ಹಲವಾರು ಅಡಚಣೆಗಳು ಎದುರಾಗುವುದು ಸಹಜ. ಅಲ್ಲಿ ಬರುವ ಒತ್ತಡಗಳನ್ನು ಸಹಿಸಿಕೊಂಡು ಕೆಲಸ ಮಾಡುವುದು ತುಂಬಾ ಕಷ್ಟ. ಆದರೆ ಕಿರಣ್ ತನ್ನ ಸ್ವಭಾವವನ್ನು ಎಲ್ಲಿಯೂ ರಾಜಿ ಮಾಡಿಕೊಳ್ಳದೆ ಪ್ರಾಮಾಣಿಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಇದರಿಂದ ಪ್ರತಿಷ್ಠಿತ ವ್ಯಕ್ತಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಯಿತು. ಆದರೆ ಕಿರಣ್ ಯಾವುದನ್ನೂ ಗಣನೆಗೆ ತಂದುಕೊಳ್ಳಲಿಲ್ಲ. ಹೀಗೆ ತನ್ನ ವೃತ್ತಿ ಬದುಕಿನಲ್ಲಿ ಹಲವಾರು ರೀತಿಯ ತೊಂದರೆಗಳನ್ನು ಅನುಭವಿಸಿದರೂ ತನ್ನ ವೃತ್ತಿಯನ್ನು ಎಂದೂ ನಿಂದಿಸದೆ, ನಗುಮುಖದಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ ಕಿರಣ್.

ರಾಜಕೀಯ ನಾಯಕರ ಒತ್ತಡಗಳಿಗೆ ಮಣಿಯದೆ ಕಿರಣ್ ಕೆಲಸ ಮಾಡಿಕೊಂಡು ಬರುವುದೇ ಒಂದು ರೀತಿಯ ದುಸ್ಸಾಹಸ ಎಂದು ಹೇಳಬಹುದು. ರಾಜಕೀಯ ಪಿತೂರಿಗಳಿಗೆ ಒಳಗಾಗಿ ಹಲವಾರು ಬಾರಿ ವರ್ಗಾವಣೆ ಶಿಕ್ಷೆಯನ್ನು ಕಿರಣ್ ಅನುಭವಿಸಬೇಕಾಯಿತು. ಕಿರಣ್ ಇಂತಹ ಕಷ್ಟಗಳನ್ನು ಎಂದೂ ದೊಡ್ಡದು ಮಾಡಿಕೊಂಡು ತನ್ನ ವೃತ್ತಿಗೆ ಅನ್ಯಾಯ ಮಾಡಲಿಲ್ಲ. ಆಕೆಗೆ ಬಾರದ ಪ್ರಶಸ್ತಿಗಳು ಇಲ್ಲ. ದೇಶ, ವಿದೇಶಗಳು ಕಿರಣ್ ಬೇಡಿಯ ಸಾಧನೆಯನ್ನು ಹೊಗಳಿ, ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ.

ಕಿರಣ್ ಬೇಡಿ ತಿಹಾರ್ ಜೈಲಿನಲ್ಲಿ ತಂದ ಬದಲಾವಣೆಗಳನ್ನು ಕಂಡು ಇಡೀ ದೇಶವೇ ಮೂಗಿನ ಮೇಲೆ ಆಶ್ಚರ್ಯದಿಂದ ಬೆರಳನ್ನು ಇಟ್ಟು ಕೊಂಡಿತು. ಸಾರಿಗೆ ಆಯುಕ್ತರಾಗಿದ್ದಾಗ ಯಾರದೇ, ಯಾವುದೇ ಮುಲಾಜಿಗೆ ಒಳಗಾಗದೆ ಸಾರಿಗೆ ವ್ಯವಸ್ಥೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿಕೊಂಡು ಬಂದ ಕೀರ್ತಿ ಕಿರಣ್ ಬೇಡಿಗೆ

ಸಲ್ಲುವುದು.

ಕಿರಣ್ ಒಬ್ಬ ಉತ್ತಮ ಟೆನ್ನಿಸ್ ಆಟಗಾರ್ತಿ. ಯಾವುದೇ ಕಷ್ಟದ ಸಮಯದಲ್ಲೂ ಕಿರಣ್ ಧೈರ್ಯ ಕಳೆದುಕೊಳ್ಳದೆ ತನ್ನ ಕಾರ್ಯವನ್ನು ನಡೆಸಿಕೊಂಡು ಬಂದಿದ್ದಾರೆ. ಕಿರಣ್ ಬೇಡಿ ಇಂದಿನ ಯುವ ಪೀಳಿಗೆಗೆ ಆದರ್ಶ ಹಾಗೂ ಮಾದರಿಯಾಗಿದ್ದಾರೆ. ಕಿರಣ್ ಬೇಡಿಯ ಹೆಸರು ಕೇಳಿದರೆ ರೌಡಿಗಳು ನಡುಗುತ್ತಿದ್ದರು ಎಂದು ಹೇಳುವವರು ಈಗಲೂ ಇದ್ದಾರೆ. ಅಂತಹ ಕಿರಣ್ ಬೇಡಿಗಳು ಹಲವಾರು ಮಂದಿ ಹುಟ್ಟಿ ಬರಬೇಕು.

## ಪಿ.ಟಿ. ಉಷಾ

ಓಟದ ಸ್ಪರ್ಧೆಯಲ್ಲಿ ಭಾರತಕ್ಕೆ ಚಿನ್ನದ ಪದಕವನ್ನು ತಂದುಕೊಟ್ಟ ಕೇರಳದ ಯುವತಿ ಪಿ.ಟಿ.ಉಷಾ. ಕೇರಳದ ಹಿಂದುಳಿದ ವರ್ಗಕ್ಕೆ ಸೇರಿದ ಉಷಾ ಬಹಳ ಶ್ರಮಪಟ್ಟು ತನ್ನ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಬಡತನದ ಕುಟುಂಬದ ಹಿನ್ನೆಲೆಯಿಂದ ಬಂದಿರುವ ಉಷಾ ತನ್ನ ಸಾಧನೆಯ ಹಾದಿಯಲ್ಲಿ ಹಲವಾರು ಅಡಚಣೆಗಳನ್ನು ಎದುರಿಸಿದ್ದಾರೆ.

ಭಾರತದ ಕ್ರೀಡಾ ಕ್ಷೇತ್ರದಲ್ಲಿ ಮಹಿಳೆಯರದು ಕಡಿಮೆ ಸಾಧನೆ ಎಂದು ಹೇಳಬಹುದಾದಂತಹ ಕಾಲದಲ್ಲಿ ಉಷಾ ಏಷ್ಯಾಡ್‌ನಲ್ಲಿ ಸ್ಪರ್ಧಿಸಿ ಎರಡು ಚಿನ್ನದ ಪದಕಗಳನ್ನು ಗಳಿಸಿ ಭಾರತದ ಕೀರ್ತಿಯನ್ನು ಉತ್ತುಂಗಕ್ಕೆ ಏರಿಸಿದ ದಿಟ್ಟ ಯುವತಿ ಎಂದು ಹೇಳಬಹುದು. ಉಷಾ ಅವರನ್ನು ಪತ್ರಿಕೆಗಳು "ಚಿನ್ನದ ಹುಡುಗಿ" ಎಂದು ಹಾಡಿ ಹೊಗಳಿ ಬರೆದವು. ಉಷಾ ಅವರನ್ನು "ಓಟದ ರಾಣಿ" ಎಂದು ಕರೆಯಲಾಯಿತು. ಆದರೆ ಇಂದಿಗೂ ಸಹ ಭಾರತೀಯ ಕ್ರೀಡಾ ಕ್ಷೇತ್ರವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ತಮ್ಮ ಮಕ್ಕಳನ್ನು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಅನುಮತಿ ನೀಡಿ ಪ್ರೋತ್ಸಾಹಿಸುವುದಿಲ್ಲ. ಕ್ರೀಡೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಲು ಆಸಕ್ತರಾಗುವುದಿಲ್ಲ.

ಪಿಲವುಲ ಕಂಡಿ ತೆಕ್ಕೆ ಪರಂಬಿಲ್ ಉಷಾ 1964ರಲ್ಲಿ ಕೇರಳದಲ್ಲಿ ಜನಿಸಿದರು. ಕೇರಳದ ಜನತೆ ಬಹಳ ಉದಾರಿಗಳು. ಬಾಲ್ಯದಿಂದಲೇ ಉಷಾಗೆ ಕ್ರೀಡೆಯ ಬಗ್ಗೆ ಅಪಾರ ಆಸಕ್ತಿ. ಹೀಗೆ ತನ್ನ ಮನಸ್ಸನ್ನು ಕ್ರೀಡೆಯ ಕಡೆಗೆ ಉಷಾ ಹರಿಸಿದರು.

## ಹೊಸ ಬೆಳಕು

ಹಬ್ಬಗಳ ಆಚರಣೆಯಲ್ಲಿ ಕುಟುಂಬದ ಸದಸ್ಯರೆಲ್ಲ ಒಟ್ಟು ಸೇರುವಾಗ ಸಂಬಂಧಗಳು ಬಲಪಡುತ್ತವೆ. ಹೃದಯಗಳು ಪರಸ್ಪರ ಬೆಸೆಯುತ್ತವೆ. ಗುರುಹಿಯರನ್ನು ಗೌರವಿಸುವ ಮನೋಭಾವವನ್ನು ಬೆಳೆಸುವಲ್ಲಿ ಈ ಹಬ್ಬಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ.

ಹಬ್ಬಗಳಿಗೆ ಸಂಬಂಧಪಟ್ಟ ಯಾವುದಾದರೂ ಒಂದು ಸಿ.ಡಿ ಪ್ರದರ್ಶನ ಮಾಡುವುದು. ಪ್ರಶ್ನೆಗಳ ಮೂಲಕ ಪಾಠ ಪ್ರವೇಶ ಮಾಡಬಹುದಲ್ಲವೇ?

1. ನಾವು ಯಾವ ಯಾವ ಹಬ್ಬಗಳನ್ನು ಆಚರಿಸುತ್ತೇವೆ?
2. ಹಬ್ಬಗಳನ್ನು ಆಚರಿಸುವ ಮುಖ್ಯ ಉದ್ದೇಶಗಳೇನು?
3. ಹಬ್ಬಗಳ ಆಚರಣೆಯಲ್ಲಿ ಯಾರೆಲ್ಲ ಭಾಗವಹಿಸುತ್ತಾರೆ?

## ಓದುವುದು

ತರಗತಿಯಲ್ಲಿ ಮಕ್ಕಳು ಪಾಠಭಾಗವನ್ನು ಗಟ್ಟಿಯಾಗಿ ಓದಲಿ. (ಅಧ್ಯಾಪಕರು ಇಲ್ಲಿ ತಮಗೆ ಇಷ್ಟವಿರುವ ತಂತ್ರಗಳನ್ನು ಬಳಸಬಹುದು. ಉದಾ: ಸರಣಿ ಓದು, ಮೌನ ಓದು, ಗಟ್ಟಿ ಓದು) ಅನಂತರ ಗುಂಪಿನಲ್ಲಿ ಓದಿ ನವೀನ ಪದಗಳನ್ನು ಕಂಡು ಹಿಡಿದು ಪಟ್ಟಿ ಮಾಡಲಿ. ಅವುಗಳ ಅರ್ಥವನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿದು ಬರೆಯಲಿ.

## ಚಟುವಟಿಕೆಗಳು

### ಚರ್ಚಿಸುವುದು

ಕೆಲವು ಪ್ರಶ್ನೆಗಳ ಮೂಲಕ ಚರ್ಚಿಸುವುದು

- ನೀವು ಮನೆಯಲ್ಲಿ ಹಿರಿಯರನ್ನು ಹೇಗೆ ಗೌರವಿಸುತ್ತೀರಿ?
- ಹಿರಿಯರನ್ನು ಗೌರವಿಸಿದಾಗ ಅವರಲ್ಲಿ ವ್ಯಕ್ತವಾಗುವ ಭಾವನೆಗಳೇನು?

ಈ ರೀತಿ ಪ್ರಶ್ನೆಗಳನ್ನು ಕೇಳುವುದರ ಮೂಲಕ ಹಿರಿಯರನ್ನು ಗೌರವಿಸುವುದು ನಮ್ಮ ಕರ್ತವ್ಯ ಎಂಬ ಪ್ರಜ್ಞೆಯನ್ನು ಮಕ್ಕಳಲ್ಲಿ ಮೂಡಿಸುವುದು.

### ಉತ್ತರ ಬರೆಯುವುದು

ಪಠ್ಯಭಾಗದಲ್ಲಿ ಕೊಡಲಾದ ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು. ಮಕ್ಕಳು ಉತ್ತರವನ್ನು ಹೇಳಲಿ. ಅನಂತರ ಬರೆದು ಮಂಡಿಸಲಿ. ಅಧ್ಯಾಪಕರು ಕರಿಹಲಗೆಯಲ್ಲಿ ಸರಿಯಾದ ಉತ್ತರವನ್ನು ಬರೆಯುವುದು. ಅದನ್ನು ನೋಡಿ ಮಕ್ಕಳು ತಾವು ಬರೆದ ಉತ್ತರವನ್ನು ಉತ್ತಮ ಪಡಿಸಲಿ.

### ಟಿಪ್ಪಣಿ ತಯಾರಿಸುವುದು

- ನಿಮ್ಮ ಊರಿನಲ್ಲಿಯೂ ಅಸಹಾಯಕಾರರಿರ ಬಹುದಲ್ಲವೇ? ಅವರಿಗೆ ನೀವು ಯಾವ ರೀತಿಯಲ್ಲಿ ಸಹಾಯವನ್ನೊದಗಿಸಬಹುದು?
- ಸಹಾಯವನ್ನೊದಗಿಸುವುದರಿಂದ ನಿಮ್ಮ ಮನದಲ್ಲಿ ಮೂಡಬಹುದಾದ ಭಾವನೆಗಳೇನು? – ಇಂತಹ ಕೆಲವು ಪ್ರಶ್ನೆಗಳನ್ನು ಕೇಳುವುದರ ಮೂಲಕ ಚರ್ಚೆ ನಡೆಸಲು ಮಕ್ಕಳಿಗೆ ಸಹಕಾರಿಯಾಗುವುದು. ಮಕ್ಕಳಿಗೆ ಟಿಪ್ಪಣಿ ಬರೆಯಲು ಹೇಳುವುದು. ಬರೆದ ಟಿಪ್ಪಣಿಯನ್ನು ಅಧ್ಯಾಪಕರ ಮಾದರಿಯೊಂದಿಗೆ ತುಲನೆ ಮಾಡಿ ಉತ್ತಮಪಡಿಸಲಿ.

### ಸಂಭಾಷಣೆ ಬರೆಯುವುದು

ನಡೆದ ಘಟನೆಗೆ ಸಂಬಂಧಿಸಿದ ಕೆಲವು ಸರಳ ಪ್ರಶ್ನೆಯನ್ನು ಅಧ್ಯಾಪಕರು ಕೇಳುವುದು. ಘಟನೆಯನ್ನು ಊಹಿಸಿಕೊಂಡು ವಿದ್ಯಾರ್ಥಿಗಳು ಸಂಭಾಷಣೆಯನ್ನು ಬರೆಯಲಿ.

- ಸಂಭಾಷಣೆಯನ್ನು ಬರೆದು ತರಗತಿಯಲ್ಲಿ ಮಂಡಿಸಲಿ.
- ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

### ಭಿತ್ತಿಪತ್ರ ತಯಾರಿಸುವುದು

- ಕಷ್ಟದಲ್ಲಿರುವವರಿಗೆ ಸಹಾಯ ಒದಗಿಸಿದ ವರದಿಗಳನ್ನು ಪತ್ರಿಕೆಗಳಿಂದ ಸಂಗ್ರಹಿಸಲಿ.
- ಸಂಗ್ರಹಿಸಿದ ವರದಿಗಳನ್ನು ಸಮರ್ಪಕವಾಗಿ ವರ್ಗೀಕರಿಸಿ, ಭಿತ್ತಿಪತ್ರಿಕೆಗೆ ಅಳವಡಿಸಲಿ.
- ಸೂಕ್ತ ಶೀರ್ಷಿಕೆಯನ್ನು ನೀಡಲಿ.

### ಬದಲಾಯಿಸಿ ಬರೆಯುವ

- ಅಭ್ಯಾಸದಲ್ಲಿರುವ ಗದ್ಯಭಾಗದ ವಾಕ್ಯಗಳನ್ನು ಪುಲ್ಲಿಂಗವಾಗಿ ಪರಿವರ್ತಿಸಲು ಹೇಳುವುದು.
- ಈ ಸಂದರ್ಭದಲ್ಲಾಗುವ ವ್ಯಾಕರಣ ಸಂಬಂಧವಾದ ವ್ಯತ್ಯಾಸಗಳನ್ನು ಮಕ್ಕಳ ಗಮನಕ್ಕೆ ತರುವುದು. ಸಾಕಷ್ಟು ಉದಾಹರಣೆಗಳ ಮೂಲಕ ವಾಕ್ಯಗಳ ಲಿಂಗ ಬದಲಾವಣೆಗೆ ಮಕ್ಕಳನ್ನು ಸಮರ್ಥರನ್ನಾಗಿಸುವುದು.

### ವಾಕ್ಯ ರಚಿಸುವ

- ಕೊಟ್ಟ ಗದ್ಯಭಾಗವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ
- ಅಡಿಗೆರೆ ಎಳೆದ ಪದಗಳನ್ನು ಗುರುತಿಸಿ ಹೇಳಲಿ
- ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು
- ಮಕ್ಕಳು ಅರ್ಥಕೋಶದ ಸಹಾಯದಿಂದ ಅರ್ಥವನ್ನು ಗುರುತಿಸಿ ಸ್ವಂತ ವಾಕ್ಯಗಳನ್ನು ರಚಿಸಲಿ

## ದಾನ ಧರ್ಮವ ಮಾಡಿರಯ್ಯ

ವಚನಗಳು, ಕೀರ್ತನೆಗಳು, ತ್ರಿಪದಿಗಳು ಮುಂತಾದ ಸಾಹಿತ್ಯ ಪ್ರಕಾರಗಳಿಂದ ಜನ ಜಾಗೃತಿಯನ್ನುಂಟು ಮಾಡಿದ ಮಹಾನುಭಾವರಿದ್ದಾರೆ. ಅಂತಹವರಲ್ಲಿ ಕನಕದಾಸರು ಒಬ್ಬರು. ಅವರು ತಮ್ಮ ಕೀರ್ತನೆಗಳ ಮೂಲಕ ಜನರಲ್ಲಿ ಧರ್ಮ ಜಾಗೃತಿಯನ್ನುಂಟು ಮಾಡಿದ್ದಾರೆ.

### ಕನಕದಾಸರು

ಶ್ರೀ ಕನಕದಾಸರು (1509–1609) ಕರ್ನಾಟಕದಲ್ಲಿ 15–16ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕವಿಗಳು ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತ್ತವರು.

ಕನಕದಾಸರು ದಂಡನಾಯಕನಾಗಿದ್ದು, ಯಾವುದೋ ಯುದ್ಧದಲ್ಲಿ ಸೋತ ಬಳಕ ಹರಿ ಭಕ್ತರಾದರಂತೆ ಅವರ ಊರು ಕಾಗಿನೆಲೆಯ ಬಾಡ ಗ್ರಾಮ(ಈಗ ಹಾವೇರಿ ಜಿಲ್ಲೆಯಲ್ಲಿದೆ), ಮಾತಾ ಪಿತೃಗಳು ಬಚ್ಚಮ ಮತ್ತು ಬೀರಪ್ಪ ಎಂದು ಹೇಳಲಾಗುತ್ತಿದೆ. ಕನಕದಾಸರ ಕೀರ್ತನೆಗಳು ಕಾಗಿನೆಲೆಯ ಕೇಶವನಿಗೆ ಅರ್ಪಿತವಾಗಿರುವುದನ್ನು ಗಮನಿಸಬಹುದು. ಜನಪ್ರಿಯ ನಂಬಿಕೆಯಂತೆ, ಕನಕದಾಸರು ಕುರುಬ ಜನಾಂಗಕ್ಕೆ ಸೇರಿದವರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಕನಕದಾಸರು ಜಾತಿ ಪದ್ಧತಿಯ ತಾರತಮ್ಯಗಳನ್ನು ಅವರು. ಕನಕದಾಸರು ಶ್ರೀವ್ಯಾಸರಾಯರ ಮೆಚ್ಚಿನ ಶಿಷ್ಯರು ಇವರ ಅಂಕಿತ – ಕಾಗಿನೆಲೆ ಆದಿಕೇಶವ

ವ್ಯಾಸರಾಯರಿಂದ ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿ ಶ್ರೀಕೃಷ್ಣನ ಭಕ್ತರು. ಅನೇಕರ ನಂಬಿಕೆಯಂತೆ ಉಡುಪಿಯ ದೇವಸ್ಥಾನದಲ್ಲಿ ಅವರಿಗೆ ಪ್ರವೇಶ ದೊರೆಯದಾದಾಗ ದೇವಸ್ಥಾನದ ಹಿಂದೆ ನಿಂತು ಹಾಡ ತೊಡಗಿದರಂತೆ (ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ) ಹಿಂದುಗಡೆಯ ಗೋಡೆ ಒಡೆದು ಕೃಷ್ಣ ವಿಗ್ರಹ ಹಿಮ್ಮುಖವಾಗಿ ತಿರುಗಿತಂತೆ (ಈಗಲೂ ಉಡುಪಿ ಶ್ರೀಕೃಷ್ಣನ ದೇವಸ್ಥಾನದ ಹಿಂದುಗಡೆಯ ಗೋಡೆಯಲ್ಲಿ ಬಿರುಕನ್ನು ಕಾಣಬಹುದು. ಇಲ್ಲಿ ಒಂದು ಕಿಟಿಕಿಯನ್ನು ನಿರ್ಮಿಸಿ ಕನಕನ ಕಿಂಡಿ ಎಂದು ಕರೆಯಲಾಗಿದೆ.

ಕನಕದಾಸರು ಸಮಾರು 200 ಕೀರ್ತನೆಗಳನ್ನು ರಚಿಸಿ ಹಾಡಿದ್ದಾರೆ. ಅವರ ಐದು ಮುಖ್ಯ ಕಾವ್ಯಕೃತಿಗಳ ಇಂತಿವೆ.

ಮೋಹನತರಂಗಿಣಿ, ನಳಚರಿತ್ರೆ, ರಾಮಧ್ಯಾನ್ಯಚರಿತೆ, ಹರಿಭಕ್ತಿಸಾರ, ನೃಸಿಂಹಸ್ತವ (ಉಪಲಬ್ದವಿಲ್ಲ)

## ಹಾಡುವುದು

- ಮಕ್ಕಳು ಅರಿತಿರುವ ಭಕ್ತಿಗೀತೆಗಳನ್ನು ಹಾಡಲಿ
- ಅವರು ಹಾಡಿದ ಹಾಡಿನ ಆಶಯವನ್ನು ತಿಳಿದಷ್ಟು ಹೇಳಲಿ
- ಪ್ರತಿಯೊಂದು ಭಕ್ತಿಗೀತೆಯಲ್ಲಿಯೂ ಉತ್ತಮ ಅಂಶಗಳಿವೆಯೆಂಬುದನ್ನು ತಿಳಿದುಕೊಳ್ಳಲಿ
- ಮಕ್ಕಳನ್ನು ಗುಂಪುಗಳನ್ನಾಗಿಸಿ ಕೀರ್ತನೆಗೆ ರಾಗವನ್ನು ಸಂಯೋಜಿಸಿ ಹಾಡಲು ಹೇಳುವುದು. ಉಳಿದ ಮಕ್ಕಳು ಸೂಚಕಗಳ ಸಹಾಯದಿಂದ ಮೌಲ್ಯಮಾಪನ ಮಾಡಲಿ. ಕನಕದಾಸರ ಕೀರ್ತನೆಗಳ ಸಿ.ಡಿ.ಯನ್ನು ಕೇಳಿಸುವಿರಲ್ಲವೇ?

## ನವೀನ ಪದಗಳು

ಕೀರ್ತನೆಯಲ್ಲಿ ಬಂದಿರುವ ಹೊಸ ಪದಗಳನ್ನು ಪಟ್ಟಿ ಮಾಡಲಿ. ಆ ಬಳಿಕ ಅರ್ಥಕೋಶದ ಸಹಾಯದಿಂದ ಸರಿಯಾದ ಅರ್ಥವನ್ನು ಕಂಡುಕೊಂಡು ಬರೆಯಲಿ. ಅಧ್ಯಾಪಕರ ಸಹಾಯದಿಂದ ಅರ್ಥವು ಸರಿಯಾಗಿರುವುದೆಂಬುದನ್ನು ದೃಢಪಡಿಸಲಿ.

**ಉತ್ತರ ಬರೆಯುವುದು :**

ಉತ್ತರಗಳನ್ನು ಕ್ರಮದಂತೆ ಬರೆಸುವುದು.

## ಆಶಯ ಬರೆಯುವುದು

**ಉದಾಹರಣೆಗೆ:**

'ಹಸಿದು ಬಂದವರಿಗೆ ಆಶನವೀಯಲುಬೇಕು' ಕನಕದಾಸರು ತಮ್ಮ ಕೀರ್ತನೆಯಲ್ಲಿ ಮಾನವ ಧರ್ಮವನ್ನು ಬಹಳ ಸೊಗಸಾಗಿ ತಿಳಿಸಿದ್ದಾರೆ. ಸತ್ಪಾತ್ರರಿಗೆ, ಅವಶ್ಯವಿರುವವರಿಗೆ ದಾನವನ್ನು ನೀಡಬೇಕು. ಅನ್ನದಾನಕ್ಕಿಂತ ಮಿಗಿಲಾದ ಇನ್ನೊಂದು ದಾನವಿಲ್ಲ.ಹಸಿವಯಿಂದ ಬಳಲುವವನಿಗೆ ಊಟವನ್ನು ನೀಡಬೇಕು ಹಸಿದವನ ಹಸಿವೆಯನ್ನು ನೀಗಿಸುವುದು ಮಾನವ ಧರ್ಮ ಎಂಬುದು ಈ ಸಾಲಿನ ಆಶಯವಾಗಿದೆ.

## ಕಳ್ಳತನಗಳ ಮಾಡಿ ಒಡಲು ಹೊರೆಯಲುಬೇಡ

ಕಳ್ಳತನ ಮಾಡಿ ಜೀವಿಸುವುದು ಸರಿಯಲ್ಲ. ಶ್ರಮಪಟ್ಟು ದುಡಿದು ಸನ್ಮಾರ್ಗದಲ್ಲಿ ಜೀವನ ನಡೆಸುವುದೇ ಸರಿಯಾದ ಬದುಕು. ಕಳ್ಳತನ ಮಾಡಿ ಸಿಗುವ ಸಂಪತ್ತು ಕೇವಲ ಕ್ಷಣಿಕ ಸುಖವನ್ನು ನೀಡಬಹುದು. 'ಕಳ್ಳನ ಮನಸ್ಸು ಹುಳ್ಳಗೆ' ಎನ್ನುವ ಗಾದೆ ಮಾತಿನಂತೆ ಅವನು ಯಾವತ್ತೂ ಸಮಾಜದಲ್ಲಿ ಭಯದಿಂದ ಜೀವಿಸಬೇಕಾಗುತ್ತದೆ. ಧೈರ್ಯ ಮತ್ತು ಆತ್ಮವಿಶ್ವಾಸಗಳನ್ನು ಅವನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಕಳ್ಳತನವನ್ನು ಮಾಡಬಾರದು ಎಂಬುದು ಈ ಸಾಲಿನ ಆಶಯವಾಗಿದೆ.

ಅಧ್ಯಾಪಕರು ಈ ಮೇಲಿನ ಮಾದರಿಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಈ ಮಾದರಿಯ ಆಧಾರದಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಭಾಗದಲ್ಲಿ ಬರೆಯುವ ಚಟುವಟಿಕೆಗಳನ್ನು ಮಾಡಲಿ.

## ಪಟ್ಟಿ ಮಾಡುವುದು

ಉತ್ತಮ ಗುಣ ನಡತೆಗಳಿರುವ ವ್ಯಕ್ತಿಗಳನ್ನು ಸಮಾಜವು ಗೌರವಿಸುತ್ತದೆ. ಅವರನ್ನು ಎಲ್ಲರೂ ಇಷ್ಟಪಡುತ್ತಾರೆ. ಹಾಗಾದರೆ ನಮ್ಮಲ್ಲಿರಬೇಕಾದ ಒಳ್ಳೆಯ ಗುಣನಡತೆಗಳು ಯಾವುವು? ಎಂದು ಪ್ರಶ್ನಿಸುವುದು. ಮಕ್ಕಳು ಅದನ್ನು ಪಟ್ಟಿ ಮಾಡಿ ಬರೆದು ಮಂಡಿಸಲಿ.

## ಅನುಭವ ಬರೆಯುವುದು

ಮಕ್ಕಳು ಮಾಡಿದ ಉತ್ತಮ ಕೆಲಸಗಳಿಗಾಗಿ

ಹಿರಿಯರಿಂದ ಅಥವಾ ಅಧ್ಯಾಪಕರಿಂದ ಪ್ರಶಂಸೆಗೆ ಒಳಗಾದ ಸಂದರ್ಭ ಹಲವಾರು ಇರಬಹುದು. ಅದು ಅವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿರುತ್ತದೆ. ಅಂತಹ ಸಂದರ್ಭವನ್ನು ನೆನಪಿಸಿಕೊಂಡು ವಿದ್ಯಾರ್ಥಿಗಳು ತರಗತಿಯಲ್ಲಿ ಬರೆದು ಮಂಡಿಸಲಿ. ಅನುಭವ ಟಿಪ್ಪಣಿಯನ್ನು ಮೌಲ್ಯನಿರ್ಣಯ ಮಾಡುವುದು ಹೇಗೆ? ಸೂಚಕಗಳನ್ನು ಮಕ್ಕಳು ನಿರ್ಧರಿಸಲಿ. ಅವುಗಳ ಸಹಾಯದಿಂದ ಓದಿ ಉತ್ತಮ ಪಡಿಸಲು ಸೂಚಿಸುವಿರಲ್ಲವೇ?

**ಹೆಚ್ಚಿನ ಓದಿಗಾಗಿ**

## ತಲ್ಲಣಿಸದಿರು

ರಾಗ: ಕೇದಾರ ಗೌಳ ತಾಳ: ಝಂಪೆ

ತಲ್ಲಣಿಸದಿರು ಕಂಡ್ಯ ತಾಳು ಮನವೆ ।।ಪ।।
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ।।ಅ।।
ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರು
ಹುಟ್ಟಿಸಿದ ದೇವ ತಾ ಹೊಣೆಗಾರನಾಗಿರಲು
ಗಟ್ಯಾಗಿ ರಕ್ಷಿಪನು ಇದಕ್ಕೆ ಸಂಶಯವಿಲ್ಲ ।।1।।
ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಹಡೆದ ಜನನಿಯ ತರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ ।।2।।
ಕಲ್ಲಿನಲ್ಲಿ ಹುಟ್ಟಿ ತಾ ಕೂಗುವ ಕಪ್ಪೆಗೆ
ಅಲ್ಲಿ ಆಹಾರವನು ತಂದೀಯವವರ್ಯಾರೊ
ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ।।3।।

**– ಸಂಗ್ರಹ**

## ತನು ನಿನ್ನದು

ರಾಗ: ಕೇದಾರ ಗೌಳ ತಾಳ: ಅಟ್ಟ

ತನು ನಿನ್ನದು ಜೀವನ ನಿನ್ನದೊ।।ಪ।।
ಅನುದಿನದಲಿ ಬಹು ಸುಖದುಃಖ ನಿನ್ನದಯ್ಯಾ ।।ಅ।।

ಸವಿನುಡಿ ವೇದ ಪುರಾಣ ಶಾಸ್ತ್ರಗಳ
ಕಿವಿಗೊಟ್ಟು ಕೇಳುವ ಕಥೆ ನಿನ್ನದು
ನವ ಮೋಹನಾಂಗೇರ ರೂಪದ ಕಣ್ಣಲಿ
ಎಲೆಯಿಕ್ಕದೆ ನೋಡುವ ನೋಟ ನಿನ್ನದಯ್ಯ ।।1।।

ಒಡಗೂಡಿ ಗಂಧ ಕಸ್ತೂರಿ ಪರಿಮಳಂಗಳ
ಬಿಡದೆ ಲೇಪಿಸಿಕೊಂಬುವುದು ನಿನ್ನದು
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡುರುಚಿಗೊಂಡರೆ ಅರುಚಿ ನಿನ್ನದಯ್ಯ ।।2।।

ಮಾಯಾಪಾಶದ ಬಲೆಯೊಳಗೆ ಸಿಲುಕಿರುವಂಥ
ಕಾಯ ಪಂಚೇಂದ್ರಿಯಂಗಳು ನಿನ್ನವು
ಕಾಯ ಜಪಿತ ಕಾಗಿನೆಲೆ ಆದಿಕೇಶವ
ರಾಯ ನೀನಲ್ಲದೆ ನನರು ಸ್ವತಂತ್ರರೆ ।।3।।

**– ಸಂಗ್ರಹ**

# ಆದರ್ಶ ಜೀವನ

ನಮ್ಮ ದೇಶವು ಹಲವಾರು ಆದರ್ಶ ವ್ಯಕ್ತಿಗಳಿಂದಾಗಿ ಪ್ರಪಂಚದಲ್ಲಿಯೇ ಪ್ರಸಿದ್ಧಿಯನ್ನು ಪಡೆದಿದೆ. ಸ್ವಾಮೀ ವಿವೇಕಾನಂದ, ಗೋಪಾಲಕೃಷ್ಣ ಗೋಖಲೆ, ಮಹಾತ್ಮಗಾಂಧಿ, ಬಾಲಗಂಗಾಧರ ತಿಲಕ ಮೊದಲಾದವರು ಅಂಥ ಆದರ್ಶ ವ್ಯಕ್ತಿಗಳು. ಇವರು ತಮ್ಮ ವೈಯಕ್ತಿಕ ಜೀವನವನ್ನು ಬದಿಗೊತ್ತಿ ಸಮಾಜಕ್ಕಾಗಿ ದುಡಿದಿದ್ದಾರೆ. ಇವರ ಅರ್ಪಣಾ ಮನೋಭಾವವು ಅಭಿನಂದನೀಯ. ಇವರ ಆದರ್ಶ ಜೀವನವು ಅನುಕರಣೀಯವಾಗಿದೆ.

ಲಾಲ್‌ಬಹಾದುರ್ ಶಾಸ್ತ್ರಿಗಳ ಭಾಷಣದ ಸಿ.ಡಿ. ಪ್ರದರ್ಶಿಸುವುದು.

ವ್ಯಕ್ತಿಪರಿಚಯದ ಮಾಹಿತಿ.

- ಅಧ್ಯಾಪಕರು ಲಾಲ್‌ಬಹಾದುರ್ ಶಾಸ್ತ್ರಿಗಳ ಹೋರಾಟದ ಕುರಿತು ಮಕ್ಕಳಿಗೆ ತಿಳಿಸುವುದು.

(ಆಕರ ಗ್ರಂಥ: ಲಾಲ್‌ಬಹಾದುರ್ ಶಾಸ್ತ್ರಿ– ಭಾರತ ಭಾರತಿ ಪ್ರಕಾಶನ)

- ಮಕ್ಕಳು ಲೇಖನ ಚಿಹ್ನೆಗಳನ್ನು ಗಮನಿಸಿಕೊಂಡು ಸ್ವರದ ಏರಿಳಿತಗಳೊಂದಿಗೆ ಗಟ್ಟಿಯಾಗಿ ಓದಲಿ.

## ಚರ್ಚಿಸುವುದು

ದೇಶದ ಅಭಿವೃದ್ಧಿಯಲ್ಲಿ ರೈತನ ಪಾತ್ರವು ಪ್ರಧಾನವಾದುದು. ಹಾಗೆಯೇ ಸೈನಿಕನ ಪಾತ್ರವೂ ಮುಖ್ಯವಾದುದು. ದೇಶದ ಸಂಪನ್ಮೂಲಗಳ ಅಭಿವೃದ್ಧಿಯು ರೈತನಿಂದಾದರೆ, ದೇಶದ ಸಂರಕ್ಷಣೆಯು ಸೈನಿಕನಿಂದಾಗುತ್ತದೆ. ಲಾಲ್‌ಬಹಾದುರ್ ಶಾಸ್ತ್ರಿಗಳ ಜೀವನಾದರ್ಶಗಳನ್ನು ಓದಿ ತಿಳಿದಿರುವರು. ಅವರು ಜೈಜವಾನ್, ಜೈ ಕಿಸಾನ್ ಎಂಬ ಘೋಷಣೆಯನ್ನು ಹೇಳಿದುದರ ಉದ್ದೇಶವನ್ನು ಚರ್ಚಿಸಲಿ.

## ಉತ್ತರ ಬರೆಯುವುದು

ಪಾಠಭಾಗದ ಸರಳ ಪ್ರಶ್ನೆಗಳಿಗೆ ಉತ್ತರ ಬರೆಯಲಿ.

## ಟಿಪ್ಪಣಿ ತಯಾರಿಸವುದು

ಗದ್ಯಭಾಗವನ್ನು ಓದಿ ತಿಳಿದುಕೊಂಡ ವಿದ್ಯಾರ್ಥಿಗಳು ಲಾಲ್‌ಬಹಾದುರ್ ಶಾಸ್ತ್ರಿಯವರ ಸ್ವಭಾವ ಮತ್ತು ಆದರ್ಶಗಳ ಕುರಿತು ಟಿಪ್ಪಣಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಲಿ.

'ಆವಶ್ಯಕತೆಗಿಂತ ಹೆಚ್ಚಿಗೆ ಬೇಡ' ಎಂಬ ಲಾಲ್‌ಬಹಾದುರ್ ಶಾಸ್ತ್ರಿಯವರ ಮಾತಿನ ಕುರಿತು ಮಕ್ಕಳು ತಮ್ಮ ಅಭಿಪ್ರಾಯವನ್ನು ಟಿಪ್ಪಣಿ ರೂಪದಲ್ಲಿ ಬರೆದು ಮಂಡಿಸಲಿ.

## ಸಂಚಿಕೆ ತಯಾರಿಸುವುದು

ಮಹಾನ್ ವ್ಯಕ್ತಿಗಳ ಜೀವನದ ಘಟನೆಗಳ ಬಗ್ಗೆ ಓದುವ ಮೂಲೆಯಿಂದ ಸಂಗ್ರಹಿಸಿ ಬರೆಯಲಿ. ಪಠ್ಯ ಪುಸ್ತಕವನ್ನು ಓದುವ ಮೂಲೆಯಲ್ಲಿ ಒದಗಿಸುವುದು.

## ಸರ್ದಾರ್ ವಲ್ಲಭ ಭ್ಯಾ ಪಟೇಲ್

ಭಾರತದ ಬಿಸ್ಮಾರ್ಕ್ ಎಂದೇ ಪ್ರಸಿದ್ಧರಾದ ಶ್ರೀ ವಲ್ಲಭ ಭ್ಯಾ ಪಟೇಲರು ಗುಜರಾತಿನಲ್ಲಿ ಜನಿಸಿದರು. ಅವರು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಇವರ ಸೇವಾ ಜೀವನಕ್ಕೆ ಒಂದು ನಿದರ್ಶನ ಇಲ್ಲಿದೆ.

1917ರಲ್ಲಿ ಅಹಮ್ಮದಾಬಾದ್‌ನಲ್ಲಿ ಪ್ಲೇಗು ಕಾಡ್ಗಿಚ್ಚಿನಂತೆ ಹರಡಿತು. ಪ್ರತಿದಿನವೂ ಜನ ಸಾಯ ತೊಡಗಿದ್ದರು. ಬಡವರು ಸಿರಿವಂತರೆನ್ನದೆ ಜನ ಊರು ಬಿಡಲು ಪ್ರಾರಂಭಿಸಿದರು. ನ್ಯಾಯಾಲಯ ಮತ್ತು ಶಾಲೆಗಳನ್ನು ಮುಚ್ಚಲಾಯಿತು. ಅದೇ ವೇಳೆ ನಗರಸಭೆಯ ಆರೋಗ್ಯ ಸಮಿತಿಯ ಅಧ್ಯಕ್ಷರಾಗಿದ್ದ ವಲ್ಲಭಭಾಯಿ ಇದನ್ನೊಂದು ಸವಾಲೆಂದು ಸ್ವೀಕರಿಸಿದರು. ಜನರಿಗೆ ಸಹಾಯ ಮಾಡಲು ಸ್ವಯಂ ಸೇವಕರ ಪಡೆಯೊಂದು ರಚನೆಗೊಂಡಿತು. ನಗರ ನಿರ್ಮಲೀಕರಣಕ್ಕೆ ಪ್ರಥಮ ಆದ್ಯತೆಯನ್ನು ಇವರು ನೀಡಿದರು. ಇವರು ಮತ್ತು ಇವರ ಸ್ವಯಂ ಸೇವಾ ಪಡೆಯವರು ತಮ್ಮ ಜೀವದ ಹಂಗು ತೊರೆದು ಜನ ಸೇವೆಗೆ ನಿಂತರು. ವಲ್ಲಭಭಾಯಿಯವರ ಸ್ನೇಹಿತನೊಬ್ಬ ಈ ಸಾಂಕ್ರಾಮಿಕ ರೋಗಕ್ಕೆ ತುತ್ತಾಗಬೇಡಿರೆಂದು ಅವರಿಗೆ ಎಚ್ಚರಿಕೆ ನೀಡಿದ. ಅದಕ್ಕೆ ವಲ್ಲಭಬಾಯಿ 'ಸಾಂಕ್ರಾಮಿಕ ಪ್ಲೇಗಿಗೆ ತುತ್ತಾಗುವುದು ಎಂತಹುದೆಂಬುದರ ಅರಿವು ನನಗಿದೆ. ಗೋದ್ರಾದಲ್ಲಿದ್ದಾಗ(1890) ನಾನೂ ಈ ಕಾಯಿಲೆ ಅನುಭವಿಸಿದ್ದೇನೆ. ಜನರ ಸೇವೆ ಮಾಡುತ್ತಾ ಸಾಯುವುದಕ್ಕೆ ನಾನು ಆಶಿಸುವೆ. ನಾನು ಅವರೊಂದಿಗೆ ಇರಬೇಕೆಂದು ಬಯಸಿದಾಗ ಬೇರೆ ಸುರಕ್ಷಿತ ಸ್ಥಳಕ್ಕೆ ನಾನು ಹೋಗಲಾರೆ' ಎಂದರು.

**ವಾಕ್ಯ ರಚಿಸುವುದು**

ಅಧ್ಯಾಪಕರು ಮಕ್ಕಳಿಗೆ ಕ್ರಿಯಾಪದಕ್ಕೆ ಸಂಬಂಧಿಸಿ ಕೆಲವೊಂದು ಉದಾಹರಣೆಯನ್ನು ನೀಡುವುದು. ಆ ಮೂಲಕ ಪಾಠಭಾಗದಲ್ಲಿ ಕೊಟ್ಟ ವಾಕ್ಯ ರಚನೆ ಚಟುವಟಿಕೆಯನ್ನು ಮಾಡಿಸುವುದು. ಅನಂತರ ಸ್ವಂತ ವಾಕ್ಯಗಳನ್ನು ರಚಿಸಿ ತರಗತಿಯಲ್ಲಿ ಮಂಡಿಸಲಿ.

**ಹೆಚ್ಚಿನ ಓದಿಗಾಗಿ**

## ಎಲ್ಲರ ಜೀವನವೂ ಒಂದೇ

ಮಹಾತ್ಮಗಾಂಧೀ ತಮ್ಮ ಬಾಲ್ಯದಿಂದಲೂ ಸಸಿಗಳನ್ನು ಪ್ರೀತಿಸುತ್ತಿದ್ದರು. ಆದರೆ ಅವರ ಮನೆಗೆ ತಾಗಿದಂತೆ ಯಾವುದೇ ತೋಟವಿರಲಿಲ್ಲವಾಗಿತ್ತು. ಆದ್ದರಿಂದ ಅವರು ಗಿಡಗಳನ್ನು ಕುಂಡಗಳಲ್ಲಿ ಸಂಗ್ರಹಿಸಿ, ಮನೆಯ ಮೇಲ್ಛಾವಣಿಯ ಮೇಲೆ ಬೆಳೆಸುತ್ತಿದ್ದರು. ಕೆಲವು ದಿನಗಳ ಅನಂತರ ಅವರ ಕುಟುಂಬ ರಾಜಕೋಟಕ್ಕೆ ತೆರಳಿದಾಗ ಅವರಿಗೊಂದು ಚಿಕ್ಕ ತೋಟ ದೊರಕಿತು.

ಗಾಂಧೀಜಿ ಪ್ರತಿದಿನ ಸಂಜೆ ತೋಟಕ್ಕೆ ಭೇಟಿ ನೀಡಿ ಎಲ್ಲಾ ಗಿಡಗಳನ್ನು ಜೋಪಾನವಾಗಿ ನೋಡಿಕೊಳ್ಳುತ್ತಿದ್ದರು. ಬೆಳಿಗ್ಗೆ ಬೇಗ ಎದ್ದು ನಗರದ ಹೊರಗಿರುವ ತೋಟವೊಂದಕ್ಕೆ ಹೋಗಿ ಅಲ್ಲಿರುವ ಕೆರೆಯಲ್ಲಿ ತಮ್ಮ ಬಟ್ಟೆಯನ್ನು ಒಗೆದು ಕೊಂಡು ಹಿಂದಿರುಗುತ್ತಿದ್ದರು. ಹಿಂದಿರುಗುವಾಗ ತಮ್ಮ ತೋಟಕ್ಕಾಗಿ ಕೆಲವು ಎಳೇ ಸಸಿಗಳನ್ನು ತರುತ್ತಿದ್ದರು. ಹೀಗೆ ಅವರು ಗಿಡ ಮತ್ತು ಹೂಗಳ ಬಗ್ಗೆ ವಿಶೇಷ ತಿಳುವಳಿಕೆಯನ್ನೇ ಪಡೆದರು. ಗಿಡ, ಮರಗಳ ಮೇಲೆ ಅವರಿಗಿದ್ದ ಪ್ರೀತಿ ಜೀವನದ ಕೊನೆಯವರೆಗೂ ಉಳಿಯಿತು.

ಒಂದು ರಾತ್ರಿ ಗಾಂಧೀಜಿ ಮಲಗಲು ತಡವಾಯಿತು.

ಆದರೆ ಅವರು ಮರುದಿನ ನೂಲು ತೆಗೆಯುವುದಕ್ಕಾಗಿ ಹಿಂಜುವುದಕ್ಕೆ ಹತ್ತಿಯನ್ನು ನೋಡುತ್ತಿದ್ದರು. ಮೀರಾಬೆನ್ ಗಾಂಧೀಜಿಯವರಿಗಾಗಿ ಚರಕವನ್ನು ಅಣಿಗೊಳಿಸುತ್ತಿದ್ದರು. ಅವರು ಆಶ್ರಮ ನಿವಾಸಿಯೋರ್ವನಿಗೆ ಚರಕದ ಸಮೀಪದಲ್ಲಿಡಲು ಸ್ವಲ್ಪ ಬುಲ್‌ಬುಲ್ ಎಲೆಗಳನ್ನು ತರುವಂತೆ ಹೇಳಿದರು.

ಅವನು ಮರದಿಂದ ಇಡೀ ಕೊಂಬೆಯನ್ನೇ ಮುರಿದು ತಂದನು. ಮೀರಾಬೆನ್ ಅವನ್ನು ನೋಡಿದರು. ಆ ಟೊಂಗೆಯಲ್ಲಿದ್ದ ಚಿಕ್ಕ ಚಿಕ್ಕ ಎಲೆಗಳು ಮಡಿಕೆಯಾಗಿ ಮುದುಡಿಕೊಂಡಿದ್ದವು. ಮೀರಾಬೆನ್ ಗಾಂಧೀಜಿಯವರ ಕೊಠಡಿಗೆ ತೆರಳಿ ಅದನ್ನು ತೋರಿಸಿ "ನೋಡಿ, ಬಾಪೂಜಿ, ಈ ಚಿಕ್ಕ ಎಲೆಗಳು ಹೇಗೆ ಸುರುಳಿಯಾಗಿ ಮುದುಡಿ ಕೊಂಡಿವೆ" ಎಂದಳು.

"ಹೌದು" ಎಂದು ಹೇಳುತ್ತಾ ಗಾಂಧೀಜಿ ಎಲೆಗಳನ್ನು ಕೋಪದಿಂದ ನೋಡಿದರು. ವೃಕ್ಷಗಳೂ ಕೂಡಾ ನಮ್ಮಂತೆಯೇ ಜೀವಿಸುತ್ತವೆ. ಉಸಿರಾಡುತ್ತವೆ ಮತ್ತು ಶ್ವಾಸೋಚ್ಛ್ವಾಸ ಮಾಡುತ್ತವೆ. ನಮ್ಮಂತೆಯೇ ಅವು ಆಹಾರ ತೆಗೆದುಕೊಳ್ಳುತ್ತವೆ. ಮರಗಳು ರಾತ್ರಿ ವೇಳೆ ವಿಶ್ರಾಂತಿ ತೆಗೆದುಕೊಳ್ಳುತ್ತವೆ. ಈ ವೇಳೆ ಮರದ ಬಳಿ ಹೋಗುವುದಾಗಲೀ ಅವುಗಳಿಂದ ಎಲೆಗಳನ್ನೂ ಬೇರ್ಪಡಿಸುವುದಾಗಲೀ ಒಳ್ಳೆಯದಲ್ಲ. ಏಕೆ ಇಷ್ಟು ದೊಡ್ಡ ಟೊಂಗೆಯನ್ನು ಕಿತ್ತಿದ್ದೀರಿ? ಸ್ವಲ್ಪವೇ ಎಲೆಗಳು ಸಾಕಾಗುತ್ತಿದ್ದವು. ನಾನು ನಿನ್ನೆಯ ಸಭೆಯಲ್ಲಿ ಏನು ಹೇಳಿದ್ದೇನೆಂದು ನೀವೆಲ್ಲಾ ಕೇಳಿದ್ದೀರಿ. ಬಡ ಹೂಗಳ ಬಗ್ಗೆ ಹೇಳಿದ್ದೆ. ಜನರು ಕೋಮಲ ಹೂಗಳನ್ನು ಕೊಯ್ಯುವುದು ಮತ್ತು ಅವನ್ನು ಮಾಲೆಯನ್ನಾಗಿ ಮಾಡಿ ನನ್ನ ಕೊರಳಿಗೆ ಅರ್ಪಿಸುವುದು ನನಗೆ ಬೇಸರವನ್ನುಂಟುಮಾಡುತ್ತದೆ" ಎಂದರು. ಮೀರಾಬೆನ್ ಹೌದೆಂದು ತಲೆ ಅಲ್ಲಾಡಿಸಿದರು. ತಾನು ಮಾಡಿದ ಕೃತ್ಯಕ್ಕೆ ವಿರುದ್ಧವಾಗಿ ಗಾಂಧೀಜಿ ಹೇಳಿದ್ದನ್ನು ಸ್ಮರಿಸಿಕೊಂಡಳು. "ಈ ರಾತ್ರಿಯಲ್ಲಿ ಆಶ್ರಮ ನಿವಾಸಿಯಿಂದ ಎಲೆಗಳನ್ನು ತರಿಸಿದ್ದು ಸರಿಯೇ" ಎಂದು ಗಾಂಧೀಜಿ ಪ್ರಶ್ನಿಸಿದರು. ಮೃದುವಾದ ಎಲೆಗಳು ಮುದುಡಿ ಕೊಂಡಾಗಲೇ ಆತ ಆ ವೃಕ್ಷದ ನೋವಿಗೆ ಕಾರಣನಾದ. ನಮ್ಮ ಮತ್ತು ಪ್ರಕೃತಿಯಮಧ್ಯದಲ್ಲಿ ಇರುವ ಸಾಮ್ಯವನ್ನು ನಾವು ಮನಗಾಣಬೇಕು ಎಂದು ಗಾಂಧೀಜಿ ನುಡಿದರು.

"ಹೌದು, ಬಾಪು, ನಾನು ಅರ್ಥಮಾಡಿಕೊಳ್ಳುತ್ತೇನೆ. ಇದು ನನ್ನ ಅವಿಚಾರದಿಂದ ಆದದ್ದು. ಇನ್ನು ಮೇಲೆ ನಾನೇ ಎಲೆಗಳನ್ನು ತರಲು ಹೋಗುತ್ತೇನೆ. ರಾತ್ರಿಯಾದ ಮೇಲೆ ಎಂದೂ ನಾನು ಎಲೆಗಳನ್ನು ತರಲು ಹೋಗುವುದಿಲ್ಲ" ಎಂದು ಮೀರಾಬೆನ್ ಕ್ಷೀಣ ಸ್ವರದಲ್ಲಿ ಉತ್ತರಿಸಿದರು.

## ಮೌಲ್ಯನಿರ್ಣಯ ಚಟುವಟಿಕೆಗಳು

1. ಕೆಳಗಿನ ಗದ್ಯಭಾಗವನ್ನು ಓದಿರಿ.

ಅಂದು ದೀಪಾವಳಿ. ರಾಮರಾಯರು ಕುರ್ಚಿಯಲ್ಲಿ ಕುಳಿತು ಗೇಟಿನ ಕಡೆಗೆ ನೋಡುತ್ತಿದ್ದರು. ಅವರ ಪತ್ನಿ ಪಕ್ಕದಲ್ಲಿ ನಿಂತಿದ್ದರು. ಅವರ ದೃಷ್ಟಿಯೂ ಗೇಟಿನ ಕಡೆಗಿತ್ತು. ಅಷ್ಟರಲ್ಲಿ ಕೆಂಪು ಗೂಟದ ಕಾರು ಭರ್ರನೆ ಗೇಟಿನ ಬಳಿ ನಿಂತಿತು. ಚಾಲಕನು ಕಾರಿನಿಂದ ಇಳಿದು ಗೇಟನ್ನು ತೆರೆದನು. ಕಾರು ಒಳಗೆ ಬಂತು. "ನಮ್ಮಮಗ ಬಂದೇ ಬಿಟ್ಟ" ರಾಮರಾಯರ ಪತ್ನಿ ಉದ್ಗರಿಸಿದರು. ಕಾರಿನಿಂದಿಳಿದ ಯುವಕ ಒಳಬಂದನು. ಅವರೊಳಗೆ ಏನೇನು ಸಂಭಾಷಣೆ ನಡೆದಿರಬಹುದು.

- ನಡೆದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.

(ರಾಮರಾಯರು: ಬಂದೆಯಾ ಮಗನೇ? ಕ್ಷೇಮವೇ ತಾನೇ?)

2. ಆಶಯ ಬರೆಯಿರಿ.

ಬೇವು ಬೆಲ್ಲದೊಳಿಡಲೇನು ಫಲ।
ಹಾವಿಗೆ ಹಾಲೆರೆದರೇನು ಫಲ।
ಕುಟಿಲವ ಬಿಡದಿಹ ಕುಜನರು ಮಂತ್ರವ।
ಪಠನೆಯ ಮಾಡಿದರೇನು ಫಲ।
ಸಟೆಯನ್ನಾಡುವ ಮನುಜರು ಮನದಲಿ।
ವಿಠಲನ ನೆನೆದರೆ ಏನು ಫಲ।
ಕಪಟತನದಿ ವಂಚಿಸುವ ಮನುಜರು।
ಜಪಗಳ ಮಾಡಿದರೇನು ಫಲ।
ಕುಪಿತ ಬುದ್ಧಿಯ ತ್ಯಜಿಸದೆ ನಿತ್ಯದೀ।
ಉಪವಾಸ ವಿದ್ದರೇನು ಫಲ।

(ಕುಟಿಲ–ಮೋಸ, ಕುಜನರು–ಕೆಟ್ಟವರು, ಪಠನ–ಹೇಳುವುದು, ತಟೆ–ಸುಳ್ಳು, ಕಪಟ–ಮೋಸ, ಕುಪಿತ–ಕೋಪ, ತ್ಯಜಿಸು–ಬಿಟ್ಟು ಬಿಡು)

- ಪದ್ಯವನ್ನು ಓದಿದಿರಲ್ಲವೇ? ಇದರ ಆಶಯವನ್ನು ಬರೆಯಿರಿ.

3. ನಿಮ್ಮನ್ನು ಹಿರಿಯರು ಹೊಗಳಿದ ಸಂದರ್ಭಗಳು ಹಲವಾರು ಇರಬಹುದಲ್ಲವೇ? ಯಾವ ಯಾವ ಸನ್ನಿವೇಶಗಳಲ್ಲಿ ನಿಮಗೆ ಹೊಗಳಿಕೆ ಸಿಕ್ಕಿದೆ?

- ನಿಮಗೆ ಬಹುಮಾನ ಸಿಕ್ಕಿದಾಗ.
- ನೀವು ಹೇಳಿದ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡಿದಾಗ.
- ನೀವು ಉತ್ತಮ ಅಂಕಗಳನ್ನು ಗಳಿಸಿದಾಗ

ಇಂತಹ ಸಂದರ್ಭಗಳಲ್ಲಿ ಹೊಗಳಿಕೆಯನ್ನು ಕೇಳುವಾಗ ನಿಮಗೆ ಬಹಳ ಸಂತೋಷವಾಗಿರಬಹುದಲ್ಲವೇ? ನಿಮ್ಮ ಒಂದು ಅನುಭವವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

4. ಟಿಪ್ಪಣಿ ಬರೆಯಿರಿ.

'ಸ್ವರಾಜ್ಯವು ನಮ್ಮ ಜನ್ಮ ಸಿದ್ಧ ಹಕ್ಕು' ಎಂಬುದು ತಿಲಕರ ಘೋಷಣೆಯಾಗಿದೆ. 'ಜೈ ಜವಾನ್ ಜೈ ಕಿಸಾನ್' ಎಂದವರು ಲಾಲ್ ಬಹದ್ದೂರ್ ಶಾಸ್ತ್ರಿ, 'ನೀವು ರಕ್ತಕೊಡಿ ನಾನು ಸ್ವಾತಂತ್ರ್ಯಕೊಡುತ್ತೇನೆ' ಎಂದವರು ನೇತಾಜಿ. 'ವಂದೇ ಮಾತರಂ' ಎಂಬ ಘೋಷಣೆಯನ್ನು ನೀಡಿದವರು ಬಂಕಿಮಚಂದ್ರ ಚಟರ್ಜಿಯವರು. ಇದರಲ್ಲಿ ನಿಮಗೆ ಯಾವ ಘೋಷಣೆ ಇಷ್ಟವಾಯಿತು? ಯಾಕೆ? ಇದರ ಬಗ್ಗೆ ಟಿಪ್ಪಣಿ ಬರೆಯಿರಿ.

* * *